# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಮೇ 12, 2023

ಸಂಪುಟ : 49 ಸಂಚಿಕೆ : 360 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಲಿಂ|| ಜಿ.ಎಸ್. ಸಿದ್ದನಗೌಡ್ರು ಪಾಟೀಲ್ ಅವರ ಧರ್ಮಪತ್ನಿ ಶ್ರೀಮತಿ ಕಾಳಮ್ಮ ಸಿದ್ದನಗೌಡ್ರು ನಿಧನ



ಜನನ : 6-3-1930

ನಿಧನ : 12-5-2023

ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಗಡಿಗುಡಾಳ್ ಗ್ರಾಮದ ವಾಸಿ,
ಲಿಂ|| ಶ್ರೀ ಜಿ.ಎಸ್. ಸಿದ್ದನಗೌಡ್ರು ಪಾಟೀಲ್, ವಕೀಲರು,
ನಿಕಟಪೂರ್ವ ಪ್ರಾಂತ ಸಂಘ ಚಾಲಕರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಪ್ರಾಂತ ಉತ್ತರ ಕರ್ನಾಟಕ.
ಮಾಜಿ ಅಧ್ಯಕ್ಷರು, ಭಾರತೀಯ ಕಿಸಾನ್ ಸಂಘ, ಕರ್ನಾಟಕ ಇವರ ಧರ್ಮಪತ್ನಿ

**ಶ್ರೀಮತಿ ಕಾಳಮ್ಮ ಸಿದ್ದನಗೌಡ್ರು** ಅವರು

ದಿನಾಂಕ 11-05-2023ರ ಗುರುವಾರ ರಾತ್ರಿ 10.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 93 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

**ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12-05-2023ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ಗಡಿಗುಡಾಳ್ ಗ್ರಾಮದಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.**

**ದುಃಖತಪ್ತ ಕುಟುಂಬ ವರ್ಗ**
✦ ಶಶಿಧರ ಪಾಟೀಲ್ ✦ ಶಿವನಗೌಡ ಪಾಟೀಲ್ ✦ ಗುರುಪ್ರಸನ್ನ ಪಾಟೀಲ್
✦ ಮಧುಕೇಶ್ವರ ಪಾಟೀಲ್ ಮತ್ತು ಗಡಿಗುಡಾಳ್ ಗೌಡ್ರು ವಂಶಸ್ಥರು
ಮೊ. : ✦9880114912 ✦9902485395 ✦9448667819 ✦8618032311

## ಈ ಸುದಿನ ನಿಮ್ಮ ಜನುಮದಿನ



ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಬಡವರ ಬಂಧು, ಅಭಿವೃದ್ಧಿಯ ಹರಿಕಾರ, ಸೌಮ್ಯ ಸ್ವಭಾವದ ಜನನಾಯಕರೂ, ಹರಿಹರ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕರೂ ಆದ

**ಶ್ರೀ ಬಿ.ಪಿ. ಹರೀಶಣ್ಣ** ಅವರಿಗೆ

ಹಾರ್ದಿಕ ಶುಭಾಶಯಗಳು...
ಭಗವಂತ ನಿಮಗೆ ಸದಾ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುವ...



**ಕೆ.ಹೆಚ್. ಮಹೇಶ್ ಕೆಂಚನಹಳ್ಳಿ**
ಅಧ್ಯಕ್ಷರು, ಟಿಎಪಿಸಿಎಂಎಸ್, ಹರಿಹರ ಮತ್ತು ಪ್ರಥಮ ದರ್ಜೆ ಗುತ್ತಿಗೆದಾರರು.



**ಕೆ.ಜಿ. ನರೇಂದ್ರ**
ಕೆಂಚನಹಳ್ಳಿ


SIGNORA
BRIDAL JEWELLERY SHOW
Till 15th June 2023

ಯಾವಾಗಲೂ ಹೊಸ ಟ್ರೆಂಡ್ ಗಳನ್ನು ಪರಿಚಯಿಸುತ್ತಿರುವ ಸುಲ್ತಾನ್ ಸಿಗ್ನೋರ ಬ್ರೈಡಲ್ ಜ್ಯುವಲ್ಲರಿ ಪ್ರದರ್ಶನದಲ್ಲಿ ಹೊಚ್ಚ ಹೊಸ ಪ್ರೀಮಿಯಂ ಆ್ಯಂಟಿಕ್ ಆಭರಣಗಳ ಇದುವರೆಗೂ ಕಾಣದ ವೈವಿಧ್ಯಮಯ ವಿನ್ಯಾಸಗಳು ಅಲ್ಲದೇ ಡೈಮಂಡ್, ಪೋಲ್ಕಿ , ಅರೇಬಿಯನ್, ಕಲ್ಕತ್ತಾ, ಬಾಂಬೆ, ಟ್ರೆಡಿಶ್ನಲ್ ಆಭರಣಗಳ ಅತ್ಯಾಕರ್ಷಕ ಸಂಗ್ರಹಗಳನ್ನು ನಿಮಗಾಗಿ ಪ್ರಸ್ತುತ ಪಡಿಸುತ್ತಿದೆ



ಮದುವೆ ಆಭರಣಗಳ ಖರೀದಿ ಯ ಮೇಲೆ ಪ್ರತ್ಯೇಕ ಪ್ಯಾಕೇಜ್

ಪಡೆಯಿರಿ ₹50 ಅಧಿಕ
ಹಳೆ ಚಿನ್ನದ ವಿನಿಮಯದ ಪ್ರತಿ ಗ್ರಾಂ ನ ಮೇಲೆ

ಫ್ಲ್ಯಾಟ್ 30% ಕಡಿತ
ಚಿನ್ನ ಹಾಗೂ ಬೆಳ್ಳಿ ಆಭರಣಗಳ ತಯಾರಿಕಾ ವೆಚ್ಚದ ಮೇಲೆ

₹8000 ಕಡಿತ
ಡೈಮಂಡ್ ಕ್ಯಾರೆಟ್ ನ ಮೇಲೆ

Benchmark International.in

ದಾವಣಗೆರೆಯಲ್ಲೇ ಅತಿ ಕಡಿಮೆ ತಯಾರಿಕಾ ವೆಚ್ಚ
Also At: • Bangalore (Ulsoor & Jayanagar) • Mangalore • Udupi • Kasaragod • Kanhangad • Surathkal
www.sulthandiamondsandgold.com
/sulthandiamondsandgold

SULTHAN® DIAMONDS & GOLD
BEGINNING OF CELEBRATIONS
SINCE 1992

DAVANAGERE: SHRAMAJEEVI COMPLEX, OPP. RMC LINK ROAD, P.B.ROAD. PH: 08192 251916, 252916
SHIVAMOGGA: OPP. MALLIKARJUNA TALKIES, GOPI CIRCLE. PH: 08182 222916,223916






Opp.High School Field, PB Road
Davangere. Ph: 08192 253777
www.joyalukkas.com

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI
PHOENIX MARKETCITY • KAMMANAHALLI | MANGALURU • MYSURU • HUBBALLI • SHIVAMOGGA
BELAGAVI • UDUPI • HASSAN • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA






6 Students Joined in AIIMS (ALL INDIA INSTITUTE OF MEDICAL SCIENCES)

ROHITH R. J. — AIIMS Delhi
SAI TEJA — AIIMS Madhurai
VINAY KUMAR — AIIMS Nagpur
MANOJ B. A. — AIIMS Mangalagiri
RAHUL C. G. — AIIMS Mangalagiri
PRAJWAL B. B. — AIIMS Bibi Nagar

SIR M V NEET LONGTERM Coaching - 2024

3 Students Joined in JIPMER

YADHUNANDAN — JIPMER Pondicherry
P. HEMANTH — JIPMER Pondicherry
SAI SANJAY — JIPMER Pondicherry

Outcome of NEET - 2022

- JJMMC, Davangere - 23 Students
- SIMS, Shimogga - 19 Students
- KIMS, Hubli - 10 Students
- MIMS, Mysore - 10 Students
- GIMS, Gadag - 10 Students
- KIMS, Karwar - 08 Students
- SSIMS, Davangere - 08 Students
- BMC, Bangalore - 06 Students
- VIMS, Ballari - 06 Students
- RIMS, Raichur - 06 Students

And Many More...

| STUDENT NAME | NEET-2021 MARKS | NEET-2022 MARKS | MARKS IMPROVED |
|---|---|---|---|
| ASHWIN G. V. | 104 | 587 | 483 |
| RAVICHANDRA | 103 | 531 | 428 |
| MILANA R. | 189 | 584 | 395 |
| PRAJWAL B. S. | 133 | 524 | 391 |
| MAQBOOLBI M. G. | 188 | 505 | 317 |
| RAJSHEKHAR | 232 | 530 | 298 |
| ANKITHA M. | 291 | 588 | 297 |
| RAKSHITHA K. R. | 267 | 563 | 296 |
| VINAY M. R. | 228 | 515 | 287 |
| VYSHNAVI S. L. | 256 | 542 | 286 |
| CHAITANYA B. | 367 | 627 | 260 |
| SANGANA GOWDA M. P. | 363 | 595 | 232 |
| PRAMOD M. N. | 280 | 508 | 228 |
| CHIRAG R. | 326 | 536 | 210 |
| PRADEEP N. M. | 339 | 545 | 206 |
| DEEKSHITH B. R. | 302 | 505 | 203 |

More than 280 Students got Medical seats in SIR MV through NEET - 2022

Admissions Started | Reserve your seat | Limited Hostel facility Available

SIR M V GROUP OF INSTITUTIONS
DAVANGERE 08192-261200 9243312223 8722141400 | SHIMOGA 8088350265 9148684483 9035141142 | BALLARI 8197764018 7618785818 9945377965

# ಕನ್ನಡಿಗನಲ್ಲಿ ಕನ್ನಡದ ತುಡಿತವಿರಲಿ



**ನ್ಯಾಮತಿ : ಕಸಾಪ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಬ್ರಹ್ಮಾಕುಮಾರಿ ವಂದನಾ**

ನ್ಯಾಮತಿ, ಮೇ 11 - ಕನ್ನಡ ನಾಡಿನಲ್ಲಿ ವಾಸವಿರುವ ಪ್ರತಿಯೊಬ್ಬರ ಮನಸ್ಸಿನಲ್ಲೂ ಕನ್ನಡದ ಬಗ್ಗೆ ತುಡಿತ ಇರಬೇಕು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ವಂದನಾ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ತು ಕಚೇರಿಯಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ನಾಡು ನುಡಿ ಹಿತಚಿಂತಕ ಆರುಂಡಿ ಕೋಟೆ ಕರೇಗೌಡ್ರ ನಾಗರಾಜಪ್ಪ ಕನ್ನಡ ಅಸ್ಮಿತೆ-ಕನ್ನಡ ಸಾಹಿತ್ಯ ಪರಿಷತ್ತು ಕುರಿತು ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ನಡೆದು ಬಂದ ದಾರಿಯನ್ನು ಹಾಗೂ ಪ್ರಸ್ತುತ ಜನಸಾಮಾನ್ಯರ ಪರಿಷತ್ತು ಆಗಿರುವ ಬಗ್ಗೆ ಮಾತನಾಡಿದರು.

ತಾಲ್ಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಅಂಬಿಕಾ ಬಿದರಗಡ್ಡೆ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಬಿ. ಶಿವಯೋಗಿ, ನಿಕಟ ಪೂರ್ವ ಅಧ್ಯಕ್ಷ ಜಿ. ನಿಜಲಿಂಗಪ್ಪ, ಸದಸ್ಯರಾದ ಸಿ.ಕೆ. ಭೋಜರಾಜ, ಸೈಯದ್ ಅಪ್ಸರ್ ಬಾಷ, ರೇವಣಸಿದ್ದಪ್ಪ ಮಾತನಾಡಿದರು.

ಆರುಂಡಿ ಕೆ. ಮಂಜಪ್ಪ, ಬೆಳಗುತ್ತಿ ಸಿ.ಕೆ. ಭೋಜರಾಜ, ಕವಿರಾಜ, ರೇವಣಸಿದ್ದಪ್ಪ, ಭಾಗ್ಯಲಕ್ಷ್ಮಿ ನಾಗಮೂರ್ತಿ ಕನ್ನಡ ನಾಡು ನುಡಿ ಗಾಯನ ನಡೆಸಿಕೊಟ್ಟರು.

ನ್ಯಾಮತಿ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಹಾಲಾರಾಧ್ಯ ಅಧ್ಯಕ್ಷತೆ ವಹಿಸಿದ್ದರು. ಕೋಶಾಧ್ಯಕ್ಷ ಕೆ.ಎಂ. ಬಸವರಾಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌರವ ಕಾರ್ಯದರ್ಶಿ ಎಸ್.ಜಿ. ಬಸವರಾಜಪ್ಪ ಸ್ವಾಗತಿಸಿದರು, ಭಾಗ್ಯಲಕ್ಷ್ಮಿ ನಿರೂಪಿಸಿದರು, ಬೆಳಗುತ್ತಿ ಹೋಬಳಿ ಕಸಾಪ ಅಧ್ಯಕ್ಷ ಎಂ.ಜಿ. ಕವಿರಾಜ ವಂದಿಸಿದರು.

# ರಾಣೇಬೆನ್ನೂರಿನಲ್ಲಿ 'ನನ್ನ ಜಯ ಖಚಿತ'



ರಾಣೇಬೆನ್ನೂರು, ಮೇ 11- ನನಗೆ ಎಲ್ಲ ಸಮಾಜದವರು ಮತ ನೀಡಿದ್ದು, ನಾನು ಜಯಗಳಿಸುವುದು ಖಚಿತವೆಂದು ಎನ್‌ಸಿಪಿ ಅಭ್ಯರ್ಥಿ ಆರ್.ಶಂಕರ್ ಇಂದು ತಮ್ಮ ಮನೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಹೇಳಿದರು.

ರಿಂಗ್ ರಸ್ತೆ ನಿರ್ಮಾಣದ ಜೊತೆಗೆ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಮಾಡಿ ಎಲ್ಲರಲ್ಲಿ ಭಾವೈಕ್ಯತೆ ಮೂಡಿಸಿ ಮಾದರಿ ತಾಲ್ಲೂಕು ಮಾಡುವ ಪ್ರಯತ್ನ ಮಾಡುತ್ತೇನೆ. ಸರ್ಕಾರ ರಚನೆಯಲ್ಲಿ ನನ್ನ ಅವಶ್ಯಕತೆ ಬಂದಲ್ಲಿ ನಾನೊಬ್ಬನೆ ತೀರ್ಮಾನ ಕೈಗೊಳ್ಳದೆ ತಾಲ್ಲೂಕಿನ ಜನರ ಹಾಗೂ ನಮ್ಮ ಮುಖಂಡರ ಎದುರು ಚರ್ಚೆ ನಡೆಸಿ ಯೋಗ್ಯ ತೀರ್ಮಾನ ಕೈಗೊಳ್ಳುತ್ತೇನೆ ಎಂದು ಶಂಕರ್ ಹೇಳಿದರು. ರಾಜು ಅಡಿವೆಪ್ಪನವರ, ಶಿವಾನಂದ ಕನ್ನಪ್ಪಳವರ, ನಿಂಗಪ್ಪ ಕೋಡಿಹಳ್ಳಿ, ಶಿವಪ್ಪ ಮಣೇಗಾರ ಮತ್ತಿತರರಿದ್ದರು.

## ಎಂ.ಇ.ಎಸ್. ಕಾನ್ವೆಂಟ್ ಫಲಿತಾಂಶ

ದಾವಣಗೆರೆ, ಮೇ 11- ನಗರದ ಆಂಜನೇಯ ಬಡಾವಣೆಯಲ್ಲಿರುವ ಎಂ.ಇ.ಎಸ್. ಕಾನ್ವೆಂಟ್‌ಗೆ ಉತ್ತಮ ಫಲಿತಾಂಶ ಬಂದಿದೆ. ಮೂವರು ಉನ್ನತ ಶ್ರೇಣಿಯಲ್ಲಿ 9 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಎನ್.ಎಂ. ವಿನಯ್ 601 (ಶೇ. 96.16), ಹೆಚ್.ಆರ್. 584 (ಶೇ. 93.44), ಎಂ. ಕಿರಣ್ 500 (ಶೇ. 80 ), ಎಸ್. ಭರತ್ 499 (ಶೇ. 79) ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ.

# ಹೆಚ್‌ಕೆಆರ್ ಸೇವೆ ಸ್ಮರಣೀಯ

## ಹೆಚ್.ಕೆ. ರಾಮಚಂದ್ರಪ್ಪ ಅವರ ಎರಡನೇ ವರ್ಷದ ಸ್ಮರಣೆ ಕಾರ್ಯಕ್ರಮ



ದಾವಣಗೆರೆ, ಮೇ 11- ರಾಜ್ಯಾದ್ಯಂತ ವಿವಿಧ ಯೋಜನೆಗಳ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಕನಿಷ್ಠ ವೇತನ, ಮೂಲಭೂತ ಸೌಕರ್ಯ, ಸಾಮಾಜಿಕ ಭದ್ರತೆ ಕಲ್ಪಿಸಲು ಹಗಲಿರುಳು ದುಡಿದಿದ್ದ ಮಹಾನ್ ವ್ಯಕ್ತಿ ದಿ. ಹೆಚ್.ಕೆ. ರಾಮಚಂದ್ರಪ್ಪ ಎಂದು ಅಂಗನವಾಡಿ ಫೆಡರೇಶನ್ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ ಸ್ಮರಿಸಿದರು.

ನಗರದ ಜಯದೇವ ವೃತ್ತದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ, ಸಹಾಯಕಿಯರ ಫೆಡರೇಶನ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ದಿ. ಹೆಚ್.ಕೆ. ರಾಮಚಂದ್ರಪ್ಪ ಅವರ ಎರಡನೇ ವರ್ಷದ ಸ್ಮರಣೆ ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸಿದರು.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಅಗತ್ಯ ಬೇಡಿಕೆಗಳನ್ನು ಈಡೇರಿಸಲು ರಾಜ್ಯಮಟ್ಟದಲ್ಲಿ ಸಂಘಟನೆ ಮಾಡಿದ ಹೆಚ್.ಕೆ. ಆರ್. ಅವರು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದಲ್ಲೂ ಕಾರ್ಯಕರ್ತರು, ಸಹಾಯಕಿಯರಿಗೆ ಸೌಲಭ್ಯ ಸಿಗುವಂತೆ ಮಾಡಿದರು ಎಂದು ಅವರ ಸೇವೆಯನ್ನು ಕೊಂಡಾಡಿದರು. ಕೇವಲ 100 ರೂ. ಗೌರವ ಧನದೊಂದಿಗೆ ವೃತ್ತಿ ಜೀವನ ಆರಂಭಿಸಿದ ನಾವುಗಳು ಹೋರಾಟದ ಫಲವಾಗಿ ಇಂದು 12,500 ರೂ. ಸಂಭಾವನೆ ಪಡೆಯುವಲ್ಲಿ ಸಫಲರಾಗಿದ್ದೇವೆ. ಇದಕ್ಕೆ ಹೆಚ್.ಕೆ. ಆರ್. ಶ್ರಮ ಕಾರಣ ಎಂದು ಹೇಳಿದರು.

ಫೆಡರೇಶನ್ ರಾಜ್ಯ ಸಂಚಾಲಕ ಆವರಗೆರೆ ವಾಸು ಮಾತನಾಡಿ, ಶೋಷಿತರ, ಕಾರ್ಮಿಕರ ಮತ್ತು ದುಡಿಯುವ ವರ್ಗದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಹೆಚ್.ಕೆ. ಆರ್. ಮುಂಚೂಣಿ ನಾಯಕರಾಗಿದ್ದರು. ಅವರ ಸಾಮಾಜಿಕ ಸೇವೆ ಶ್ಲಾಘನೀಯ ಎಂದರು.

ಸಂಘಟನೆಯ ಮುಖಂಡರಾದ ವಿಶಾಲಾಕ್ಷಿ ಮೃತ್ಯುಂಜಯ ಮಾತನಾಡಿದರು. ಜಗಳೂರು ತಾಲ್ಲೂಕು ಅಧ್ಯಕ್ಷ ಸುಶೀಲಮ್ಮ, ಚನ್ನಗಿರಿ ತಾಲ್ಲೂಕು ಅಧ್ಯಕ್ಷೆ ವಿಮಲಾಕ್ಷಿ, ದಾವಣಗೆರೆ ತಾಲ್ಲೂಕು ಅಧ್ಯಕ್ಷೆ ಕೆ.ಸಿ. ನಿರ್ಮಲ, ಕಾರ್ಯದರ್ಶಿ ಡಿ. ಗೀತಾ, ಗೌರವಾಧ್ಯಕ್ಷೆ ರೇಣುಕಮ್ಮ, ಭರಮಕ್ಕ, ಮಂಜುಳ ಮತ್ತಿತರರಿದ್ದರು.

# ಎಸ್ಸೆಸ್ಸೆಲ್ಸಿಯಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ ಶೇ. 97.92 ಫಲಿತಾಂಶ



ಹರಪನಹಳ್ಳಿ, ಮೇ 11- ಆನಂತನಹಳ್ಳಿಯ ಸರ್ಕಾರಿ ಆದರ್ಶ ವಿದ್ಯಾಲಯ (ಆರ್‌ಎಂಎಸ್‌ಎ) ಕ್ಕೆ ಎಸ್ಸೆಸ್ಸೆಲ್ಸಿಯಲ್ಲಿ ಶೇ. 97.92 ಫಲಿತಾಂಶ ಬಂದಿದೆ ಎಂದು ಆದರ್ಶ ವಿದ್ಯಾಲಯದಮುಖ್ಯೋಪಾಧ್ಯಾಯ ಹೆಚ್.ಕೆ. ಚಂದ್ರಪ್ಪ ತಿಳಿಸಿದ್ದಾರೆ.

ಪರೀಕ್ಷೆ ಕುಳಿತವರು - 72, ಉತ್ತೀರ್ಣರಾದವರು - 70, ಪರೀಕ್ಷೆಗೆ ಗೈರು ಹಾಜರಿ ಆದವರು - 1, ಪರೀಕ್ಷೆಯಲ್ಲಿ ಅನುತ್ತೀರ್ಣರಾದವರು - 1, ಶಾಲೆಗೆ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಕು. ರಶ್ಮಿತಾ ಎಸ್.ಎಂ., ಪಡೆದ ಅಂಕಗಳು 612. ಶಾಲೆಗೆ ಎರಡನೇ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಕು. ದಿವ್ಯಾ ಕೆ.ಸಿ., ಪಡೆದ ಅಂಕಗಳು 605.

ಶಾಲೆಗೆ ಮೂರನೇ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ ಕು. ಯು.ಎಂ. ಚೈತ್ರ, ಪಡೆದ ಅಂಕ 596. ಅತಿ ಹೆಚ್ಚು ಅಂಕ ಪಡೆದು ಶಾಲೆಗೆ ಕೀರ್ತಿ ತಂದುಕೊಟ್ಟ ವಿದ್ಯಾರ್ಥಿಗಳಿಗೆ ಶಾಲೆಯ ಪರವಾಗಿ, ಮುಖ್ಯೋಪಾಧ್ಯಾಯರ ಪರವಾಗಿ, ಸರ್ವ ಶಿಕ್ಷಕರ ಪರವಾಗಿ, ಎಸ್‌ಡಿಎಮ್‌ಸಿ ಅವರ ಪರವಾಗಿ, ವೈಯಕ್ತಿಕವಾಗಿ ಅಭಿನಂದಿಸಿದ್ದಾರೆ.

# ಗೊಲ್ಲರಹಳ್ಳಿ ವೆಂಕಟೇಶ್ವರ ಆಂಗ್ಲ ಮಾಧ್ಯಮ ಶಾಲೆಗೆ ಶೇ. 97 ಫಲಿತಾಂಶ





ಹೊನ್ನಾಳಿ, ಮೇ 11- ತಾಲೂಕಿನ ಗೊಲ್ಲರಹಳ್ಳಿ ಗ್ರಾಮೀಣ ವಿದ್ಯಾಸಂಸ್ಥೆಯ ಶ್ರೀ ವೆಂಕಟೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 2022-23ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.97 ಫಲಿತಾಂಶ ಬಂದಿದೆ ಎಂದು ಎಂದು ಸಂಸ್ಥೆ ಕಾರ್ಯದರ್ಶಿ ಜಿ.ಪಿ.ಹರೀಶ್ ತಿಳಿಸಿದ್ದಾರೆ. ಪರೀಕ್ಷೆಗೆ ಕುಳಿತ ಒಟ್ಟು 29 ವಿದ್ಯಾರ್ಥಿಗಳಲ್ಲಿ 28 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 5 ಡಿಸ್ಟಿಂಕ್ಷನ್, 18 ಪ್ರಥಮ, 5 ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ವಿದ್ಯಾರ್ಥಿನಿಯರಾದ ಎ.ಜಿ.ದಿವ್ಯ, ಬೆನಕನಕಹಳ್ಳಿ ಗ್ರಾಮ (593) ಶೇ.94.88, ಎಚ್.ಬಿ.ಯಶಸ್ವಿನಿ, ಬೆನಕನಹಳ್ಳಿ ಗ್ರಾಮ (582) ಶೇ.93.12, ಪಲ್ಲವಿ ಕೆ.ಆಚಾರ್, ಕಮ್ಮಾರಗಟ್ಟೆ ಗ್ರಾಮ (578) ಶೇ.92.48, ಅಮೂಲ್ಯ ಎಂ.ಉಪ್ಪಾರ್, ಕುಂದೂರು ಗ್ರಾಮ (546) ಶೇ.87.36, ಜಿ.ಎನ್.ನವ್ಯ, ಹೊಸದೇವರ ಹೊನ್ನಾಳಿ ಗ್ರಾಮ (541) ಶೇ.86.56 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.

# ಹರಪನಹಳ್ಳಿ ಎಸ್ಸೆಸ್ಸೆಲ್ಸಿ ಫಲಿತಾಂಶ ವಿಜಯನಗರ ಜಿಲ್ಲೆಗೆ ಮೂರನೇ ಸ್ಥಾನ

ಹರಪನಹಳ್ಳಿ, ಮೇ 11- ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ತಾಲ್ಲೂಕಿನಲ್ಲಿ 4089 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 3732 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಶೇ.91.26 ರಷ್ಟು ಫಲಿತಾಂಶ ಬಂದಿದೆ ಎಂದು ಕ್ಷೇತ್ರಶಿಕ್ಷಣಾಧಿಕಾರಿ ಯು.ಬಸವರಾಜಪ್ಪ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ್ದು, ಹರಪನಹಳ್ಳಿ ತಾಲ್ಲೂಕು ವಿಜಯನಗರ ಜಿಲ್ಲೆಯಲ್ಲಿ ಫಲಿತಾಂಶದಲ್ಲಿ ಮೂರನೇ ಸ್ಥಾನ ಪಡೆದಿದೆ ಎಂದು ತಿಳಿಸಿದ್ದಾರೆ. 2026 ಬಾಲಕರಲ್ಲಿ 1811 ಬಾಲಕರು ಹಾಗೂ 2063 ಬಾಲಕಿಯರಲ್ಲಿ 1921 ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಪಟ್ಟಣದ ಕೆಸಿಎ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಬಸವರಾಜ ಕುಂಬಾರ 614 ಅಂಕ ಗಳಿಸಿ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಪಟ್ಟಣದ ವಿವಿಎಸ್ ಪ್ರೌಢಶಾಲೆಯ ತನ್ಮಯಿ ಕೆ.ಐ. ಹಾಗೂ ಆದರ್ಶ ವಿದ್ಯಾಲಯದ ಎಸ್.ಎಂ.ಎ.ರಶ್ಮಿಕ 612 ಅಂಕ ಗಳಿಸಿ ತಾಲ್ಲೂಕಿಗೆ ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಪಟ್ಟಣದ ವಿವಿಎಸ್ ಪ್ರೌಢಶಾಲೆಯ ಹರಪನಹಳ್ಳಿಯ ಎಂ.ಬಿ.ರೆಹಾನ್ ಮಲ್ಲಿಕ್ 611 ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾನೆ. ತಾಲ್ಲೂಕು ಉತ್ತಮ ಫಲಿತಾಂಶ ಪಡೆಯಲು ಕಾರಣೀಭೂತರಾದ ತಾಲ್ಲೂಕು ಆಡಳಿತಕ್ಕೆ, ಎಲ್ಲಾ ಶಿಕ್ಷಕರಿಗೆ, ಪೋಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

## ಎಸ್. ಜಯರಾಜ್ ಸವಣೂರು ನಿಧನ



ದಾವಣಗೆರೆ ಸಿಟಿ ಜೆ.ಹೆಚ್ ಪಟೇಲ್ ಬಡಾವಣೆ 3ನೇ ಮೇನ್, 2ನೇ ಕ್ರಾಸ್ ವಾಸಿ ಎಸ್.ಜಯರಾಜ್ ಸವಣೂರು (72) ಇವರು ದಿನಾಂಕ 11.5.2023ರ ಗುರುವಾರ ಬೆಳಿಗ್ಗೆ 6.45ಕ್ಕೆ ನಿಧನರಾಗಿರುತ್ತಾರೆ. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯಯ ದಿನಾಂಕ 11.5.2023ರ ಗುರುವಾರ ಸಂಜೆ ನಗರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

## ಬಿಳಿಚೋಡು ಶೆಟ್ರು ಬಿ.ಎಸ್. ನಾಗರಾಜಪ್ಪ ನಿಧನ



ದಾವಣಗೆರೆ ಸಿಟಿ ಹೆಚ್‌ಕೆಆರ್ ಸರ್ಕಲ್, ಸಾಯಿ ಮೆಡಿಕಲ್ಸ್ ಎದುರುಗಡೆ ವಾಸಿ ಬಿಳಿಚೋಡು ಶೆಟ್ರು ಬಿ.ಎಸ್. ನಾಗರಾಜಪ್ಪ (76) ಇವರು ದಿನಾಂಕ 11.5.2023ರ ಗುರುವಾರ ಸಂಜೆ 7.35ಕ್ಕೆ ನಿಧನರಾಗಿರುತ್ತಾರೆ. ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯಯ ದಿನಾಂಕ 12.5.2023ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಬಿ.ಪಿ.ಹರೀಶ್ ಹುಟ್ಟುಹಬ್ಬ ಆಚರಣೆ

## ವಿವಿಧ ದೇವಸ್ಥಾನಗಳಲ್ಲಿ ಇಂದು ವಿಶೇಷ ಪೂಜೆ




ಹರಿಹರ, ಮೇ 11 - ಶುಕ್ರವಾರ ಮಾಜಿ ಶಾಸಕ ಬಿ.ಪಿ.ಹರೀಶ್ ಹುಟ್ಟು ಹಬ್ಬದ ಅಂಗವಾಗಿ ತಾಲ್ಲೂಕಿನ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ನಗರ ಘಟಕ ಪ್ರಧಾನ ಕಾರ್ಯದರ್ಶಿ ಹೆಚ್.ಮಂಜನಾಯ್ಕ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿ ಹರೀಶ್ ಹುಟ್ಟು ಹಬ್ಬದ ಅಂಗವಾಗಿ ನಗರದ ಎಲ್ಲಾ ವಾರ್ಡ್‌ಗಳಲ್ಲಿ ಮತ್ತು ತಾಲ್ಲೂಕಿನ ಪ್ರತಿ ಗ್ರಾಮದ ದೇವಾಲಯಗಳಲ್ಲಿ ಆಯಾ ಭಾಗದ ಬಿಜೆಪಿ ಪ್ರತಿನಿಧಿಗಳು ವಿಶೇಷ ಪೂಜೆ ನೆರವೇರಿಸಲಿದ್ದಾರೆ. ಅಲ್ಲದೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿನ ಒಳ ರೋಗಿಗಳಿಗೆ ಹಣ್ಣು, ಹಾಲು ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ದೂಡಾ ಸದಸ್ಯ ಬಾತಿ ಚಂದ್ರಶೇಖರ್, ರಾಜು ರೋಖಡೆ, ಮಲತೇಶ್ ಭಂಡಾರಿ, ಪ್ರಧಾನ ಕಾರ್ಯದರ್ಶಿಗಳಾದ ಮಂಜನಾಯ್ಕ ಹೆಚ್. ತುಳಜಪ್ಪ ಭೂತೆ, ನಗರಸಭಾ ಸದಸ್ಯ ಎ.ಕೆ.ಹನುಮಂತಪ್ಪ ಆಟೋ, ಮುಖಂಡರಾದ ಸುನೀಲ್ ಕುಮಾರ್, ವೀರೇಶ್ ಅಚಾರ್, ರಾಜೇಶ್ ವರ್ಣೇಕರ್, ಭರತ್ ಶೆಟ್ಟಿ, ಕಿರಣ್ ಉಯಿಲ್ ಗೋಳ್, ಗಿರೀಶ್ ಹೆಚ್. ಮತ್ತಿತರರು ಉಪಸ್ಥಿತರಿದ್ದರು.

# ಪ್ರಧಾನಿ ಮೋದಿ ವಿರುದ್ಧ ಹಕ್ಕುಚ್ಯುತಿ ಆರೋಪ

ನವದೆಹಲಿ, ಮೇ 11 – ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು 'ಕರ್ನಾಟಕ ಸಾರ್ವಭೌಮ' ಎಂಬ ಹೇಳಿಕೆ ನೀಡಿದ್ದಾರೆ ಎನ್ನುವ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹಕ್ಕುಚ್ಯುತಿ ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ಮಾಣಿಕ್ಯಂ ಟ್ಯಾಗೋರ್ ಅವರು ದೂರಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಪತ್ರ ಬರೆದಿರುವ ಟ್ಯಾಗೋರ್, ಈ ವಿಷಯವನ್ನು ಸಂಸತ್ತಿನ ಹಕ್ಕುಚ್ಯುತಿ ಸಮಿತಿಗೆ ವಹಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಾರ್ವಜನಿಕರಲ್ಲಿ ಸುಳ್ಳು ಮಾಹಿತಿ ಹರಡಿದ್ದಾರೆ ಎಂದು ಟ್ಯಾಗೋರ್ ಅವರು ಪತ್ರದಲ್ಲಿ ಆರೋಪಿಸಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ನೀಡಿರುವ ಹೇಳಿಕೆಯು ಸಂಸತ್ತಿನ ಹಕ್ಕುಚ್ಯುತಿ ನಿಯಮಗಳ ಉಲ್ಲಂಘನೆಯಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಅವರು ಸುಳ್ಳು ಆರೋಪ ಮಾಡಿದ್ದಾರೆ ಎಂದು ಟ್ಯಾಗೋರ್ ದೂರಿದ್ದಾರೆ.

# ಶ್ರೀ ಸಿದ್ದೇಶ್ವರ ಶಾಲೆಗೆ ಉತ್ತಮ ಫಲಿತಾಂಶ



ದಾವಣಗೆರೆ, ಮೇ 11- ನಗರದ ಆಂಜನೇಯ ಬಡಾವಣೆಯ ಶ್ರೀ ಸಿದ್ದೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿರುತ್ತದೆ. ಪ್ರಥಮ ದರ್ಜೆಯಲ್ಲಿ 26 ವಿದ್ಯಾರ್ಥಿಗಳು, ದ್ವಿತೀಯ ದರ್ಜೆಯಲ್ಲಿ ಮೂರು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಎನ್.ಎಂ. ಪಾರ್ವತಿ 613 ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

# ಪ್ರಜ್ಞಾವಂತ ಶಿಕ್ಷಕರು ಓದುವ ಕೌಶಲ್ಯ ರೂಢಿಸಿಕೊಳ್ಳಬೇಕು



**ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವ ಭೂ ದಿನ ಹಾಗೂ ವಿಶ್ವ ಪುಸ್ತಕ ದಿನಾಚರಣೆಯಲ್ಲಿ ಪ್ರಾಚಾರ್ಯ ಡಾ. ಕೆ.ಎಸ್. ದಿವಾಕರ ನಾಯ್ಕ**

ದಾವಣಗೆರೆ, ಮೇ 11- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವ ಭೂ ದಿನ ಹಾಗೂ ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿ ಸಿದ್ದ ನೂತನ ಶಿಕ್ಷಣ ಮಹಾವಿದ್ಯಾ ಲಯದ ಪ್ರಾಚಾರ್ಯ ಡಾ. ಕೆ.ಎಸ್. ದಿವಾಕರ ನಾಯ್ಕ ಮಾತನಾಡಿ, ವಿಶ್ವ ಪುಸ್ತಕ ದಿನಾಚರಣೆಯ 2023 ರ ಘೋಷವಾಕ್ಯ ಸ್ಥಳೀಯ ಭಾಷೆಗಳು ಎಂದಾಗಿದೆ ಎಂದರು.

ಪ್ರಜ್ಞಾವಂತ ಶಿಕ್ಷಕರು ಓದುವ ಕೌಶಲ್ಯವನ್ನು ರೂಢಿಸಿಕೊಳ್ಳಬೇಕು. ಹೆಚ್ಚಾಗಿ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಇ-ಪುಸ್ತಕದ ಮಹತ್ವದ ಕುರಿತು ತಿಳಿಸಿದರು. ಭೂಮಿಯ ಸಂರಕ್ಷಣೆಯು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು ಎಂದು ತಿಳಿಸಿದರು.

ಪುಸ್ತಕ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಘವೇಂದ್ರ ಹೈಟೆಕ್ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕ ಬಸವರಾಜ ಹನುಮಲಿಯವರು ಪುಸ್ತಕದ ಮಹತ್ವದ ಕುರಿತು ಮಾತನಾಡುತ್ತಾ, ಪುಸ್ತಕ ನಮ್ಮ ನಿಜವಾದ ಸ್ನೇಹಿತ ಎಂದು ತಿಳಿಸಿದರು. ಯುವ ಜನತೆಯಲ್ಲಿ ಪುಸ್ತಕದ ಪ್ರೇಮವನ್ನು ಬೆಳೆಸುವುದೇ ಪುಸ್ತಕ ದಿನಾಚರಣೆಯ ಉದ್ದೇಶವಾಗಿದೆ ಎಂದರು. ಅತ್ಯುತ್ತಮ ಪುಸ್ತಕ ನಮ್ಮ ಸಂಗಾತಿ ಇದ್ದ ಹಾಗೆ. ಪುಸ್ತಕ ಓದುವುದರಿಂದ ಜ್ಞಾನವನ್ನು ಸಂಪಾದಿಸಬಹುದು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಂ.ಎನ್. ರಾಘವೇಂದ್ರ ಅವರು ವಿಶ್ವ ಭೂ ದಿನದ ಕುರಿತು ಮಾತನಾಡುತ್ತಾ, 'Invest in our planet' 2023 ರ ಘೋಷ ವಾಕ್ಯದ ಅರ್ಥ ತಿಳಿಸಿದರು. ಭೂಮಿಯ ಉಗಮ, ಭೂಮಿಯ ಆಕಾರ, ಚಲನೆ, ಸೂರ್ಯನಿಂದ ಭೂಮಿ ಇರುವ ದೂರದ ಬಗ್ಗೆ ಭೂಮಿಯ ಮೇಲಿನ ಹವಾಮಾನ ಬದಲಾವಣೆ ಮಾಹಿತಿ ನೀಡಿದರು. ಭೂಮಿ ಮೇಲಿನ ಜೀವ ಸಂಕುಲವನ್ನು ಹಾಗೂ ಸಂಪನ್ಮೂಲಗಳನ್ನು ಉಳಿಸಲು, ಸಂರಕ್ಷಿಸಲು ಸಲಹೆ ನೀಡಿದರು.

ಪ್ರಶಿಕ್ಷಣಾರ್ಥಿ ಕು. ಎಂ.ಸಿ. ನಾಗವೇಣಿ, ಪ್ರಾರ್ಥಿಸಿದರೆ, ಕು. ಚೈತ್ರ ಪಟೇಲ್ ಅತಿಥಿಗಳನ್ನು ಸ್ವಾಗತಿಸಿದರು.

ಪ್ರಶಿಕ್ಷಣಾರ್ಥಿ ಟಿ. ಮರುಳಸಿದ್ದಪ್ಪ ಅವರು ವಿಶ್ವ ಭೂ ದಿನದ ಕುರಿತು ಹಾಗೂ ಆರ್. ಲಾವಣ್ಯ ಅವರು ವಿಶ್ವ ಪುಸ್ತಕ ದಿನದ ಕುರಿತು ಮಾತನಾಡಿದರು,

ಪ್ರಶಿಕ್ಷಣಾರ್ಥಿ ಎಂ.ಯು ಮಮತ ಅತಿಥಿಗಳ ಪರಿಚಯ ಮಾಡಿದರೆ, ಕು. ಆಯೇಷಾ ಸಿದ್ದಿಕಾ ಅವರು ಅತಿಥಿಗಳಿಗೆ ವಂದಿಸಿದರು. ಕು. ಜಿ.ಯು. ದೀಪಿಕಾ ನಿರೂಪಿಸಿದರು.

# ಗೋಣಿವಾಡದ ಸೋಮೇಶ್ವರ ವಸತಿ ಶಾಲೆಗೆ ಶೇ. 100ರಷ್ಟು ಫಲಿತಾಂಶ



ದಾವಣಗೆರೆ, ಮೇ 11- ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗೋಣಿವಾಡದ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯ ಸತತ 10ನೇ ವರ್ಷ ಶೇ. 100 ರಷ್ಟು ಫಲಿತಾಂಶ ಪಡೆದಿದ್ದು, ಈ ಬಾರಿ ಕು. ಕ್ರೀನಾ ಕೆ.ಎಸ್. 625 ಕ್ಕೆ 617 ಅಂಕ ಪಡೆದಿದ್ದು ಶೇ. 98.72 ಪಡೆದು ಶಾಲೆಗೆ ಪ್ರಥಮ ಸ್ಥಾನ, ಕು. ಸುಹಾನ ಡಿ. ಮತ್ತು ಕು. ಕೃತಿಕಾ ಕೆ.ಎಂ. 625 ಕ್ಕೆ 614 ಅಂಕ ಗಳಿಸಿ ದ್ವಿತೀಯ ಸ್ಥಾನವನ್ನು ಹಂಚಿಕೊಂಡಿದ್ದಾರೆ. ಶಾಲೆಗೂ ಮತ್ತು ಪೋಷಕರಿಗೂ ಗೌರವ ತಂದಿರುವ ಉತ್ತಮ ಫಲಿತಾಂಶ ಕ್ಕೆ ಸಹಕರಿಸಿದ ವಿದ್ಯಾರ್ಥಿಗಳಿಗೂ ಮತ್ತು ಪೋಷಕರುಗಳಿಗೂ ಶಾಲೆಯ ಆಡಳಿತ ಮಂಡಳಿಯು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಜೆ.ಎಸ್. ಅನುಷಾಗೆ 575 ಅಂಕ



ದಾವಣಗೆರೆ, ಮೇ 11- ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಏಜು ವಿಷ್ಯಾ ಪ್ರೌಢಶಾಲೆಯ ವಿದ್ಯಾರ್ಥಿನಿ ಅನುಷಾ ಜೆ.ಎಸ್. (ಜಾಲಹಳ್ಳಿ) 625 ಅಂಕಗಳಿಗೆ 575 ಅಂಕಗಳನ್ನು ಪಡೆದುಕೊಂಡಿದ್ದಾರೆ. ಕನ್ನಡ-125, ಇಂಗ್ಲಿಷ್-95, ಹಿಂದಿ- 100, ಗಣಿತ- 74, ವಿಜ್ಞಾನ- 87, ಸಮಾಜ- 96 ಅಂಕಗಳನ್ನು ಪಡೆದಿದ್ದಾಳೆ.

# ಶ್ರೀ ಆಂಜನೇಯ ಪ್ರೌಢಶಾಲೆಗೆ ಶೇ. 90 ರಷ್ಟು ಫಲಿತಾಂಶ

ದಾವಣಗೆರೆ, ಮೇ 11- ನಗರದ ಯರಗುಂಟೆ ಹೊಸ ಬಡಾವಣೆ, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಆಂಜನೇಯ ಪ್ರೌಢಶಾಲೆಯು ಅನುದಾನಿತವಾಗಿದ್ದು, 2022-23ನೇ ಸಾಲಿನಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 90 ರಷ್ಟು ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾದ ಇಬ್ಬರು ವಿದ್ಯಾರ್ಥಿಗಳಿಗೆ ಶೇ. 85 ರಷ್ಟು ಅಂಕಗಳನ್ನು ಪಡೆದಿದ್ದಾರೆ. 10 ವಿದ್ಯಾರ್ಥಿಗಳು ಪ್ರಥಮ ದರ್ಜೆ, 11 ವಿದ್ಯಾರ್ಥಿಗಳು ದ್ವಿತೀಯ ದರ್ಜೆ, 2 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಗೆ ಉತ್ತಮ ಫಲಿತಾಂಶ ನೀಡಿದ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿಯ ಕಾರ್ಯದರ್ಶಿ ಜಿ.ಟಿ. ತಿಮ್ಮಪ್ಪ, ಮುಖ್ಯ ಶಿಕ್ಷಕ ಠಾಕ್ರ್ಯ ನಾಯ್ಕ, ಎಲ್.ಕೆ. ಮತ್ತು ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

# ರಕ್ತದಾನ ಆರೋಗ್ಯಯುತ ಜೀವನಕ್ಕೆ ಸಹಕಾರಿ



**ವಿಶ್ವ ಹಿಮೊಫಿಲಿಯಾ ದಿನಾಚರಣೆ ಪ್ರಯುಕ್ತ ಹಿಮೊಫಿಲಿಯಾ ಬಾಧಿತರ 'ಪೋಷಕರಿಂದ ಸ್ವಯಂ ಪ್ರೇರಿತ ರಕ್ತದಾನ' ಶಿಬಿರದಲ್ಲಿ ರವಿನಾರಾಯಣ್**

ದಾವಣಗೆರೆ, ಮೇ 11- ಎಲ್ಲಾ ದಾನಗಳಲ್ಲೇ ರಕ್ತದಾನ ಶ್ರೇಷ್ಠದಾನ, ರಕ್ತವನ್ನು ದಾನ ಮಾಡುವುದು ಒಳ್ಳೆಯ ಕಾರ್ಯ. ರಕ್ತದಾನ ಮತ್ತೊಬ್ಬರ ಪ್ರಾಣ ಉಳಿಸುವ ಜೊತೆಗೆ ವ್ಯಕ್ತಿ ಆರೋಗ್ಯಯುತ ಜೀವನ ನಡೆಸಲು ಸಹಕಾರಿಯಾಗಲಿದೆ ಎಂದು 56 ಬಾರಿ ರಕ್ತದಾನ ಮಾಡಿರುವ ನಿವೃತ್ತ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರವಿ ನಾರಾಯಣ್ ತಿಳಿಸಿದರು.

ವಿಶ್ವ ಹಿಮೊಫಿಲಿಯಾ ದಿನಾಚರಣೆ ಪ್ರಯುಕ್ತ ಹಿಮೊಫಿಲಿಯಾ ಬಾಧಿತರ ಪೋಷಕರಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ನನಗೆ ಪ್ರಸ್ತುತ 66 ವರ್ಷವಾಗಿದ್ದು, ಆರೋಗ್ಯವಾಗಿದ್ದೇನೆ ಹಾಗೂ ರಕ್ತದಾನ ಮಾಡಲು ಈಗಲೂ ಉತ್ಸುಕನಾಗಿದ್ದೇನೆ. ಆದರೆ ವೈಜ್ಞಾನಿಕವಾಗಿ ಮತ್ತು ಕಾನೂನು ಅಡ್ಡಿ ಬರುತ್ತದೆ ಎಂದು ಅಸಹಾಯಕತೆಯಿಂದ ಹೇಳಿದರು. ಡಾ|| ಸುರೇಶ್ ಹನಗವಾಡಿಯವರ ಪರಿಚಯದಿಂದ ರಕ್ತದಾನ ಮಾಡಲು ಪ್ರೇರಣೆ ನೀಡಿತು ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಡಾ|| ಸುರೇಶ್ ಹನಗವಾಡಿ ಅವರು ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಮಾತನಾಡುತ್ತಾ, ರಕ್ತಕ್ಕೂ ಹಾಗೂ ಹಿಮೊಫಿಲಿಯಾ ರೋಗಕ್ಕೂ ಅವಿನಾಭಾವ ಸಂಬಂಧವಿದ್ದು, ರಕ್ತದ ಅಂಶಗಳಾದ ಫ್ಯಾಕ್ಟರ್ 8 ಮತ್ತು 9 ಔಷಧಿಗಳ ಚಿಕಿತ್ಸೆಗೆ ಅವಲಂಬಿತರಾಗಿದ್ದಾರೆ. ತಮ್ಮ ಹಿಮೊಫಿಲಿಯಾ ಮಕ್ಕಳನ್ನು ನಮ್ಮ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಗೆ ಕರೆ ತರುವುದು ಸಾಮಾನ್ಯ. ಆದರೆ, ಇಂದು ಅವರ ಪೋಷಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ತಮ್ಮ ಕೃತಜ್ಞತಾ ಭಾವ ಮೆರೆದಿದ್ದು ತುಂಬಾ ವಿಶೇಷ, ಐತಿಹಾಸಿಕ ಎಂದು ಬಣ್ಣಿಸಿದರು. ಈ ರೀತಿಯ ರಕ್ತದಾನವನ್ನು ನಿರಂತರವಾಗಿ ಮಾಡುವ ಮುಖಾಂತರ ತಮ್ಮ ಆರೋಗ್ಯವನ್ನೂ ಕಾಪಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು. ಹಿಮೊಫಿಲಿಯಾ ಚಿಕಿತ್ಸಾ ಕ್ರಮದಲ್ಲಿ 1950 ರಿಂದ ಆದ ಆಮೂಲಾಗ್ರ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಸಂಸ್ಥೆಯ ಉಪಾಧ್ಯಕ್ಷರು (ಅಭಿವೃದ್ಧಿ) ಡಾ|| ಬಿ.ಟಿ. ಅಚ್ಯುತ್ ಮಾತನಾಡಿ, ಸಾವು ಬದುಕಿನ ಮಧ್ಯ ಹೋರಾಟ ನಡೆಸುವವರನ್ನು ಬದುಕಿಸಲು ರಕ್ತದಾನ ಮಾಡುವುದು ಅವಶ್ಯಕ ಹಾಗೂ ಸಮಾಜಮುಖಿ ಕಾರ್ಯ. ಇಂತಹ ಶಿಬಿರಗಳು ಯಥೇಚ್ಛವಾಗಿ ನಡೆಯಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸಂಸ್ಥೆಯ ಮಹಿಳಾ ವಿಭಾಗದ ಅಧ್ಯಕ್ಷರಾದ ಡಾ|| ಮೀರಾ ಹನಗವಾಡಿ ಮಾತನಾಡಿ, ಹೆಣ್ಣು ಮಕ್ಕಳು ರಕ್ತವನ್ನು ನೈಸರ್ಗಿಕವಾಗಿ ಬೇರೆ ಬೇರೆ ರೂಪದಲ್ಲಿ ಹೊರಹಾಕುತ್ತಾರೆ. ಆದರೆ ಪುರುಷರು ರಕ್ತದಾನ ಮಾಡುವುದರಿಂದ ಮಾತ್ರ ರಕ್ತವನ್ನು ಹೊರಹಾಕಬೇಕಾಗುತ್ತದೆ. ರಕ್ತದಾನ ಮಾಡುವುದ ರಿಂದ ಹೊಸ ರಕ್ತ ವೃದ್ಧಿಯಾಗಿ ಆರೋಗ್ಯವು ಉತ್ತಮವಾಗಿರುತ್ತದೆ ಎಂದು ಹೇಳಿದರು.

ರಕ್ತದಾನ ಶಿಬಿರದಲ್ಲಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಸದಾಶಿವಪ್ಪ, ಲೈಫ್ ಲೈನ್ ಬ್ಲಡ್ ಬ್ಯಾಂಕ್ ಮುಖ್ಯಸ್ಥ ಡಾ|| ದೊಡ್ಡಿ ಕೊಪ್ಪದ್, ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ನವೀನ್ ಹವಳಿ, ಸಂಸ್ಥೆಯ ಉಪಾಧ್ಯಕ್ಷ (ಹಣಕಾಸು) ಸಂಜೀವ್ ಹೆಗಡೆ ಹಾಗೂ ಇತರರು ಉಪಸ್ಥಿತರಿದ್ದರು.

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಮೇ 12, 2023

## ಅತಂತ್ರ ಸಮೀಕ್ಷೆ, ಮೈತ್ರಿಯ ಕನವರಿಕೆ

### ಚುನಾವಣಾ ಸಮರದ ನಂತರ ಕೈ ಜೋಡಿಸಲು ತೆರೆ ಮರೆಯ ಕಸರತ್ತು

ಬೆಂಗಳೂರು, ಮೇ 11 - ಕರ್ನಾಟಕ ವಿಧಾನಸಭೆ ಅತಂತ್ರ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಚುನಾವಣೋತ್ತರ ಸಮೀಕ್ಷೆಗಳು ತಿಳಿಸಿರುವ ನಡುವೆ, ಮೈತ್ರಿ ರಾಜಕೀಯದ ಮಾತುಗಳು ಗರಿಗೆದರಿವೆ.

ಫಲಿತಾಂಶದ ಬೆನ್ನಲ್ಲೇ ಜೆಡಿಎಸ್‌ನ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ದೀಢಿರನೇ ಸಿಂಗಾಪೂರಕ್ಕೆ ತೆರಳಿರು ವದು ಗಮನ ಸೆಳೆದಿದೆ.



ಸಿಂಗಾಪೂರಕ್ಕೆ ತೆರಳಿರುವ ಕುಮಾರಸ್ವಾಮಿ ಅವರನ್ನು ಕೇಂದ್ರದ ಹಿರಿಯ ಸಚಿವರೊಬ್ಬರು ಭೇಟಿಯಾಗಿ ಮೈತ್ರಿ ಸರ್ಕಾರ ರಚನೆ ಕುರಿತಂತೆ ಸಮಾಲೋಚನೆ ನಡೆಸಿದ್ದಾರೆ. ಉಭಯ ನಾಯಕರು ನಾಳೆ ರಾತ್ರಿಯವರೆಗೂ ಅಲ್ಲಿಯೇ ತಂಗಲಿದ್ದು, ಮತ ಎಣಿಕೆ ದಿನವಾದ ಶನಿವಾರದಂದು ರಾಷ್ಟ್ರಕ್ಕೆ ಹಿಂತಿರುಗಲಿದ್ದಾರೆ ಎಂದು ಹೇಳಲಾಗುತ್ತಿದೆ.

ಚುನಾವಣಾ ಪೂರ್ವ ಸಮೀಕ್ಷೆ, ಮತಗಟ್ಟೆ ಸಮೀಕ್ಷೆ ಹಾಗೂ ಕೇಂದ್ರ ಗುಪ್ತಾಚರ ವರದಿ ಆಧಾರದ ಮೇಲೆ ರಾಜ್ಯದಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತ ಪಡೆಯುವುದಿಲ್ಲ ಎಂಬ ಅಭಿಪ್ರಾಯ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅಧಿಕಾರ ಹಿಡಿಯಬಾರದು. ಅವರಿಗೆ ಅಧಿಕಾರ ನೀಡಿದರೆ, ಮುಂದಿನ ಲೋಕಸಭಾ ಚುನಾವಣೆಗೆ ಇದೇ ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುತ್ತಾರೆ ಎಂಬ ಭಯ ಬಿಜೆಪಿ ನಾಯಕರಿಗೆ ಮೊದಲಿನಿಂದಲೂ ಇದೆ. ಈ ಹಿನ್ನೆಲೆಯಲ್ಲಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡು ಸರ್ಕಾರ ರಚನೆಗೆ ಬಿಜೆಪಿ ಮುಂದಾದರೆ ಅಚ್ಚರಿ ಪಡಬೇಕಿಲ್ಲ.

ಕಳೆದ 2006 ರಲ್ಲಿ ಬಿಜೆಪಿ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡು ಮೊದಲ ಬಾರಿಗೆ ಸರ್ಕಾರ ರಚನೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಂದು ಕುಮಾರಸ್ವಾಮಿ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು.

ಇನ್ನೊಂದೆಡೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಹರಸಾಹಸ ನಡೆಸಿದೆ. ತಮಗೆ 120 ರಿಂದ 130 ಸ್ಥಾನಗಳು ಲಭ್ಯವಾಗಲಿದೆ ಎಂಬ ನಂಬಿಕೆ ಪಕ್ಷದ ನಾಯಕರಲ್ಲಿದೆ. ಆದರೂ, ಕೊರತೆಯಾದಲ್ಲಿ ಜೆಡಿಎಸ್ ಸಹಕಾರ ಪಡೆಯಲು ಚಿಂತನೆ ನಡೆದಿದೆ.

ಕರ್ನಾಟಕದಲ್ಲಿ ಪಕ್ಷ ಮೇಲುಗೈ ಸಾಧಿಸಲಿದೆ ಮಾಹಿತಿ ಬರುತ್ತಿದ್ದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಹೊಣೆ ಹೊತ್ತ (5ನೇ ಪುಟಕ್ಕೆ)

## ರಾಜ್ಯಪಾಲರು, ವಿಧಾನಸಭಾಧ್ಯಕ್ಷರ ಕ್ರಮಗಳಿಗೆ ಸುಪ್ರೀಂಕೋರ್ಟ್ ಆಕ್ಷೇಪ

### ಉದ್ಧವ್ ರಾಜೀನಾಮೆ ನೀಡಿದ್ದಾರೆ, ಮತ್ತೆ ಮುಖ್ಯಮಂತ್ರಿ ಮಾಡಲಾಗದು

ನವದೆಹಲಿ, ಮೇ 11 – ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ಅವರು ಕಳೆದ ವರ್ಷ ಜೂನ್ ತಿಂಗಳಲ್ಲಿ ಸದನದಲ್ಲಿ ಬಲಾ ಬಲ ಪರೀಕ್ಷೆಗೆ ಒಳಗಾಗದೇ ರಾಜೀನಾಮೆ ನೀಡಿರುವ ಕಾರಣದಿಂದ ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಶಿವಸೇನೆ ಪಕ್ಷದಲ್ಲಿ ಒಡಕುಂಟಾದ ನಂತರ ಮಹಾ ವಿಕಾಸ್ ಅಘಾಡಿ (ಎಂ.ವಿ.ಎ.) ಸರ್ಕಾರ ಅಲ್ಪಮತಕ್ಕಿಳಿದಿತ್ತು. ನಂತರ ಉದ್ಧವ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆನಂತರದಲ್ಲಿ ಏಕನಾಥ ಶಿಂಧೆ ನೇತೃತ್ವದ ಸರ್ಕಾರ ಅಧಿಕಾರ ವಹಿಸಿಕೊಂಡಿತ್ತು. ನಂತರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಿ, ಶಿಂಧೆ ಸರ್ಕಾರ ಅಕ್ರಮ ಎಂದು ದೂರಲಾಗಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ



ಸಂವಿಧಾನಿಕ ಪೀಠ ಸರ್ವಸಮ್ಮತಿಯ ತೀರ್ಪು ನೀಡಿದ್ದು, ಠಾಕ್ರೆ ಸದನದಲ್ಲಿ ಬಲಾಬಲ ಪ್ರದರ್ಶನ ಎದುರಿಸದೇ ರಾಜೀನಾಮೆ ನೀಡಿದ್ದಾರೆ. ಈ ಕಾರಣಕ್ಕಾಗಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗದು ಎಂದು ತಿಳಿಸಿದೆ. ಇದರಿಂದಾಗಿ ಶಿಂಧೆ ಸರ್ಕಾರ ಮುಂದುವರೆಯಲು ದಾರಿಯಾಗಲಿದೆ.

ಆದರೆ, ಶಿವಸೇನೆಯಲ್ಲಿ ಒಡಕು ಉಂಟಾದ ನಂತರ ಠಾಕ್ರೆ ಸದನದಲ್ಲಿ ಬಹುಮತ ಕಳೆದು ಕೊಂಡಿದ್ದಾರೆ ಎಂದು ಹೇಳಲು ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಅವರಿಗೆ ಯಾವುದೇ ಕಾರಣಗಳು ಇರಲಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ.

ವಿಧಾನಸಭೆಯಲ್ಲಿ ಬಹುಮತ ಸಾಬೀತು ಪಡಿಸುವಂತೆ ರಾಜ್ಯಪಾಲರು ಹೇಳಿದ್ದು ಸಮರ್ಥನೀಯವಲ್ಲ. ರಾಜ್ಯಪಾಲರ ಎದುರು ಸಲ್ಲಿಸಲಾದ ದಾಖಲೆಗಳಿಂದ ಸರ್ಕಾರ ಬಹುಮತ ಕಳೆದುಕೊಂಡಿರುವ ನಿರ್ಧಾರಕ್ಕೆ ಬರಲು ಸಾಧ್ಯವಾಗದು ಎಂದೂ ನ್ಯಾಯಾಲಯ ಹೇಳಿದೆ.

ಶಾಸಕರು ಎಂ.ವಿ.ಎ. ಸರ್ಕಾರ ತೊರೆಯಲು ನಿರ್ಧರಿಸಿದ್ದಾರೆ ಎಂಬುದಕ್ಕೆ ರಾಜ್ಯಪಾಲರ ಬಳಿ ಯಾವುದೇ ದಾಖಲೆಗಳಿರಲಿಲ್ಲ. ಕೆಲ ಶಾಸಕರು ಭಿನ್ನಮತ ವ್ಯಕ್ತಪಡಿಸುವುದು, ಸದನದ ಬಲಾಬಲ ಪರೀಕ್ಷೆಗೆ ಸಾಕಾಗದು. ಎಂ.ವಿ.ಎ. ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆಯುವುದಾಗಿ ಶಾಸಕರು ನಿಲುವು ತಿಳಿಸಿರಲಿಲ್ಲ. ಅವರು ಪಕ್ಷದ ಕ್ರಮದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರು ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ. (5ನೇ ಪುಟಕ್ಕೆ)

## ದೆಹಲಿಯಲ್ಲಿ ಪೊಲೀಸ್, ಕಾನೂನು, ಜಮೀನಿಗೆ ಮಾತ್ರ ಕೇಂದ್ರ ಸೀಮಿತ

### ರಾಜ್ಯ ಸರ್ಕಾರಕ್ಕೆ ಉಳಿದೆಲ್ಲ ಅಧಿಕಾರ ನೀಡಿದ ಸುಪ್ರೀಂ ಕೋರ್ಟ್


ನವದೆಹಲಿ, ಮೇ 11 – ಪೊಲೀಸ್, ಕಾನೂನು ಸುವ್ಯವಸ್ಥೆ ಹಾಗೂ ಜಮೀನು ಹೊರತು ಪಡಿಸಿ ದೆಹಲಿ ಸರ್ಕಾರಕ್ಕೆ ಉಳಿದೆಲ್ಲ ವಿಷಯಗಳ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಇದು ಆಡಳಿತಾರೂಢ ಆಮ್ ಆದ್ಮಿ ಪಾರ್ಟಿ ಸರ್ಕಾರಕ್ಕೆ ದೊರೆತ ದೊಡ್ಡ ಗೆಲುವಾಗಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ಸರ್ವಸಮ್ಮತಿಯ ತೀರ್ಪು ನೀಡಿದೆ. ಎಂಟು ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯಗಳ ನಡುವೆ ಅಧಿಕಾರ ಕುರಿತ ಸಂಘರ್ಷ ನಡೆದಿತ್ತು.

ಸಹಕಾರಿ ಒಕ್ಕೂಟ ತತ್ವದಡಿ ಕೇಂದ್ರ ಸರ್ಕಾರ ಸಂವಿಧಾನದ ಗಡಿಯಲ್ಲಿ ತನ್ನ ಅಧಿಕಾರ ಬಳಸಬೇಕು ಎಂದು ನ್ಯಾಯಾಲಯ ಹೇಳಿದೆ.

ಈ ಸಂದರ್ಭದಲ್ಲಿ ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಸುಪ್ರೀಂ ಕೋರ್ಟ್, ಸಂಪೂರ್ಣ (5ನೇ ಪುಟಕ್ಕೆ)

## ಆರೋಗ್ಯ ತಪಾಸಣೆಗಾಗಿ ಹೆಚ್ಡಿಕೆ ಸಿಂಗಾಪುರಕ್ಕೆ



ಬೆಂಗಳೂರು, ಮೇ 11 – ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರು ಆರೋಗ್ಯ ತಪಾಸಣೆಗಾಗಿ ಸಿಂಗಾಪುರಕ್ಕೆ ತೆರಳಿದ್ದಾರೆ. ಚುನಾವಣಾ ಪ್ರಚಾರದ ಸಮಯದಲ್ಲಿ ಕುಮಾರಸ್ವಾಮಿ ಅವರು ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಈಗ ಆರೋಗ್ಯ ತಪಾಸಣೆಗಾಗಿ ತಮ್ಮ ಆಪ್ತ ಸಹಾಯಕ ಹಾಗೂ ಇತರ ಕೆಲವರೊಂದಿಗೆ ಸಿಂಗಾಪುರಕ್ಕೆ ತೆರಳಿದ್ದಾರೆ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

## ವಿಧಾನಸಭೆ ಚುನಾವಣೆ: ಜಿಲ್ಲೆಯಲ್ಲಿ ಶೇ. 78.12 ರಷ್ಟು ಮತದಾನ

ದಾವಣಗೆರೆ, ಮೇ 11- ರಾಜ್ಯ ವಿಧಾನಸಭೆಗೆ ನಿನ್ನೆ ನಡೆದ ಚುನಾವಣೆಯಲ್ಲಿ ಅಂತಿಮ ಅಂಕಿ-ಅಂಶಗಳನ್ವಯ ಜಿಲ್ಲೆಯ 7 ಕ್ಷೇತ್ರಗಳಿಂದ 1126497 ಜನರು ಮತದಾನ ಮಾಡಿದ್ದು, ಒಟ್ಟಾರೆ ಶೇ 78.12 ರಷ್ಟು ಮತದಾನವಾಗಿದೆ ಎಂದು ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 721964 ಪುರುಷ, 720004 ಮಹಿಳೆಯರು, 118 ಇತರೆ ಸೇರಿ 1442086 ಮತದಾರರಲ್ಲಿ 573295 ಪುರುಷ, 553179 ಮಹಿಳೆಯರು ಹಾಗೂ 23 ಇತರೆ ಮತದಾರರು ಸೇರಿ ಒಟ್ಟು 1126497 ಜನರು ಮತದಾನ ಮಾಡಿದ್ದಾರೆ. ಕ್ಷೇತ್ರವಾರು ವಿವರ ಇಂತಿದೆ.

**ಜಗಳೂರು ಶೇ. 80.38:** 97690 ಪುರುಷ, 95257 ಮಹಿಳೆ, ಇತರೆ 11 ಸೇರಿ 192958 ರಲ್ಲಿ 79439 ಪುರುಷ, 75656 ಮಹಿಳೆ ಸೇರಿ 155095 ಜನರು ಮತದಾನ ಮಾಡಿದ್ದಾರೆ

**ಹರಿಹರ ಶೇ. 80.45 :** 103667 ಪುರುಷ, 103832 ಮಹಿಳೆ, 18 ಇತರೆ ಸೇರಿ 207517 ಮತದಾರರಲ್ಲಿ 85247 ಪುರುಷ, 81689 ಮಹಿಳೆ, 9 ಇತರೆ ಸೇರಿ 166945 ಮತ ಚಲಾವಣೆಯಾಗಿದೆ

**ದಾವಣಗೆರೆ ಉತ್ತರ ಶೇ.68.61:** 119353 ಪುರುಷ, 121841 ಮಹಿಳೆ, 38 ಇತರೆ ಸೇರಿ



241232 ಮತದಾರರಲ್ಲಿ 82558 ಪುರುಷ, 82933 ಮಹಿಳೆ, 7 ಇತರೆ ಸೇರಿ 165498 ಮತದಾನ ಮಾಡಿದ್ದಾರೆ.

**ದಾವಣಗೆರೆ ದಕ್ಷಿಣ ಶೇ. 69.08:** 104762 ಪುರುಷ, 105873 ಮಹಿಳೆ, 33 ಇತರೆ ಸೇರಿ 210668 ಮತದಾರರಲ್ಲಿ 73556 ಪುರುಷ, 71975 ಮಹಿಳೆ, 3 ಇತರೆ ಸೇರಿ 145534 ಮತದಾನವಾಗಿದೆ.

**ಮಾಯಕೊಂಡ ಶೇ. 84.28:** 96491 ಪುರುಷ, 94803 ಮಹಿಳೆ, 6 ಇತರೆ ಸೇರಿ 191300 ಒಟ್ಟು ಮತದಾರರಲ್ಲಿ 82623 ಪುರುಷ, 78603 ಮಹಿಳೆ, 2 ಇತರೆ ಸೇರಿ ಒಟ್ಟು 161228 ಮತ ಚಲಾವಣೆಯಾಗಿದೆ.

**ಚನ್ನಗಿರಿ ಶೇ. 82.57:** 100266 ಪುರುಷ, 99194 ಮಹಿಳೆ, 8 ಇತರೆ ಸೇರಿ 199468 ರಲ್ಲಿ 84576 ಪುರುಷ, 80123 ಮಹಿಳೆ, 1 ಇತರೆ ಸೇರಿ 164700 ಮತ ಚಲಾಯಿಸಿದ್ದಾರೆ.

**ಹೊನ್ನಾಳಿ ಶೇ. 84.19:** 99735 ಪುರುಷ, 99204 ಮಹಿಳೆ, 4 ಇತರೆ ಸೇರಿ 198943 ಮತದಾರರಲ್ಲಿ 85296 ಪುರುಷ, 82200 ಮಹಿಳೆಯರು ಹಾಗೂ ಇತರೆ 1 ಸೇರಿ ಒಟ್ಟು 167497 ಮತದಾರರು ಮತ ಚಲಾಯಿಸಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ 2018 ರ ಚುನಾವಣೆಯಲ್ಲಿ 75.96 ಶೇಕಡವಾರು ಮತದಾನವಾಗಿತ್ತು. ಕ್ಷೇತ್ರವಾರು ವಿವರದನ್ವಯ ಜಗಳೂರು ಶೇ. 77.37, ಹರಿಹರ 71.17, ದಾವಣಗೆರೆ ಉತ್ತರ 64.85, ದಾವಣಗೆರೆ ದಕ್ಷಿಣ 65.54, ಮಾಯಕೊಂಡ 82.44, ಚನ್ನಗಿರಿ 79.91 ಹಾಗೂ ಹೊನ್ನಾಳಿಯಲ್ಲಿ ಶೇ 82.96 ರಷ್ಟು ಮತದಾನವಾಗಿತ್ತು.

ಈ ಬಾರಿಯ ಮತದಾನದಲ್ಲಿ ಶೇಕಡವಾರು ಹೆಚ್ಚಳವಾದ ವಿವರ: ಜಗಳೂರು ಶೇ 3.03, ಹರಿಹರ 9.31, ದಾವಣಗೆರೆ ಉತ್ತರ 3.76, ದಕ್ಷಿಣ 3.54, ಮಾಯಕೊಂಡ 1.74, ಚನ್ನಗಿರಿ 2.63 ಹಾಗೂ ಹೊನ್ನಾಳಿ ಶೇ 1.25 ರಷ್ಟು ಮತದಾನ ಹೆಚ್ಚಳವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಇಟ್ನಾಳ್ ತಿಳಿಸಿದ್ದಾರೆ.

2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಶೇ. 75.68 ಹಾಗೂ 2018ರ ಚುನಾವಣೆಯಲ್ಲಿ ಶೇ. 75.67ರಷ್ಟು ಮತದಾನವಾಗಿತ್ತು.

## ರಾಜ್ಯದಲ್ಲಿ ಶೇ. 73.19 ದಾಖಲೆಯ ಮತದಾನ

ಬೆಂಗಳೂರು, ಮೇ 11 – ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಶೇ.73.19ರಷ್ಟು ಮತದಾನವಾಗಿದೆ. ಇದು ದಾಖಲೆಯ ಪ್ರಮಾಣದ ಮತದಾನ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅತಿ ಹೆಚ್ಚು ಸ್ಥಾನ ಗಳಿಸಲಿದೆಯಾದರೂ, ಅತಂತ್ರ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇದೆ ಎಂದು ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ತಿಳಿಸಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಶೇ.85.56ರಷ್ಟು ಮತದಾನವಾಗಿದೆ. ನಂತರದ ಸ್ಥಾನದಲ್ಲಿರುವ ಬೆಂಗಳೂರು ಗ್ರಾಮಾಂತರದಲ್ಲಿ ಶೇ.85.08ರಷ್ಟು ಮತದಾನವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ಭಾಗದಲ್ಲಿ ಅತಿ ಕಡಿಮೆ ಶೇ.52.33ರಷ್ಟು ಮತದಾನವಾಗಿದೆ. ನಾಳೆ ಶನಿವಾರದಂದು ಮತ ಎಣಿಕೆ ನೆರವೇರಲಿದೆ.

2018ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಶೇ.72.44ರಷ್ಟು ಮತದಾನವಾಗಿತ್ತು. ಆ ಸಂದರ್ಭದಲ್ಲಿ ಬಿಜೆಪಿ 104 ಸ್ಥಾನ ಗಳಿಸಿತ್ತು. ಬಹುಮತಕ್ಕೆ 113 ಸ್ಥಾನಗಳ ಅಗತ್ಯವಿತ್ತು.

## ದಾವಿವಿಯಲ್ಲಿ ನಾಳೆ ಮತ ಎಣಿಕೆ

### ಪೊಲೀಸ್ ಸರ್ಪಗಾವಲಿನಲ್ಲಿ ಅಭ್ಯರ್ಥಿಗಳ ಭವಿಷ್ಯ ಭದ್ರ




ದಾವಣಗೆರೆ, ಮೇ 11- ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಶನಿವಾರ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ.

ಮತ ಎಣಿಕೆ ಸುಸೂತ್ರವಾಗಿ ನಡೆಯಲು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಬಿಗಿ ಭದ್ರತೆಯೊಂದಿಗೆ ಸಕಲ ಸಿದ್ಧತೆ ನಡೆಸಿದೆ.

ಬುಧವಾರ ಸಂಜೆ ಮತ ಎಣಿಕೆ ಮುಗಿದಿದ್ದು, ತಡ ರಾತ್ರಿ ವರೆಗೂ ಡಿಮಸ್ಟರಿಂಗ್ ಕಾರ್ಯ ನಡೆದಿತ್ತು. ಅಧಿಕಾರಿಗಳು ಇವಿಎಂ ಮತ ಯಂತ್ರಗಳನ್ನು ಬಿಗಿ ಬಂದೋಬಸ್ತ್‌ನಲ್ಲಿ ಭದ್ರತಾ ಕೊಠಡಿಗಳಿಗೆ ಸಾಗಿಸಿದ್ದು, ಲೀಸ್ ಹಾಗೂ ಚುನಾವಣಾ ಅಧಿಕಾರಿಗಳು ಮತ ಯಂತ್ರಗಳಿರುವ ಭದ್ರತಾ ಕೊಠಡಿಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.

ಬೆಳಗ್ಗೆ 8 ರಿಂದ ಮತ ಎಣಿಕೆ ಕಾರ್ಯ ನಡೆಯಲಿದೆ. ಎಲ್ಲಾ ಭದ್ರತಾ ಕೊಠಡಿಗಳು ಸಿಸಿ ಟಿವಿ ಸರ್ವೇಕ್ಷಣೆಗೆ ಒಳಪಟ್ಟಿವೆ. ಪ್ರತಿ ಕ್ಷೇತ್ರಕ್ಕೆ 14 ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದ್ದು, 15 ರಿಂದ 18 ಸುತ್ತುಗಳ ವರೆಗೆ ಎಣಿಕೆ ನಡೆಯಲಿದೆ. ಚುನಾವಣಾ ಏಜೆಂಟರುಗಳು ಹಾಗೂ ಮತ ಕೇಂದ್ರದಲ್ಲಿ ಬರುವವರು ಯಾವುದೇ ಎಲೆಕ್ಟ್ರಾನಿಕ್ ಉಪಕರಣಗಳು ಮೊಬೈಲ್‌ಗಳನ್ನು ತರುವಂತಿಲ್ಲ. ಈ ಉಪಕರಣಗಳನ್ನು ಎಣಿಕಾ ಕೇಂದ್ರದಲ್ಲಿ ನಿಷೇಧಿಸಲಾಗಿದೆ.

ಇತ್ತ ಅಭ್ಯರ್ಥಿಗಳ ಎದೆಯಲ್ಲಿ ಢವ ಢವ ಶುರುವಾಗಿದ್ದರೆ, ಮತದಾರರಲ್ಲಿ (5ನೇ ಪುಟಕ್ಕೆ)

### ಸಂಚಾರ ಮಾರ್ಗ ಬದಲಾವಣೆ

**ಮತ ಎಣಿಕೆ ಕಾರ್ಯ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ಹಿನ್ನೆಲೆಯಲ್ಲಿ ಈ ಮಾರ್ಗದಲ್ಲಿ ಸಂಚರಿಸುವ ವಾಹನಗಳಿಗೆ ಮಾರ್ಗ ಬದಲಾವಣೆ ಮಾಡಲಾಗಿದೆ.**

**ದಾವಣಗೆರೆಯಿಂದ ಸಂತೇಬೆನ್ನೂರು, ಚನ್ನಗಿರಿಗೆ ಹೋಗುವ ವಾಹನ ಸವಾರರು ಶಿರಮಗೊಂಡನಹಳ್ಳಿ, ಹದಡಿ ಮೂಲಕ ಚನ್ನಗಿರಿ ಕಡೆಗೆ ಹೋಗಬೇಕಿದೆ.**

**ಚನ್ನಗಿರಿ ಕಡೆಯಿಂದ ಸಂತೇಬೆನ್ನೂರು ಮಾರ್ಗವಾಗಿ ದಾವಣಗೆರೆ ಕಡೆಗೆ ಬರುವವರು ಕುರ್ಕಿಯ ಹತ್ತಿರ ಎಡ ತಿರುವು ತೆಗೆದುಕೊಂಡು ಹದಡಿಯಿಂದ ದಾವಣಗೆರೆ ಕಡೆಗೆ ಬರುವುದು ಹಾಗೂ ಚಿತ್ರದುರ್ಗ ಕಡೆಗೆ ಹೋಗುವವರು ಕುರ್ಕಿಯ ಹತ್ತಿರ ಬಲ ತಿರುವು ತೆಗೆದುಕೊಂಡು ಆನಗೋಡು ಮುಖಾಂತರ ಚಿತ್ರದುರ್ಗ, ಬೆಂಗಳೂರು ಕಡೆಗೆ ಹೋಗಬೇಕಿದೆ.**

## ಸೋಯಾ, ಸೂರ್ಯಕಾಂತಿ ಎಣ್ಣೆ ಆಮದಿಗೆ ಸುಂಕ ವಿನಾಯಿತಿ

ನವದೆಹಲಿ, ಮೇ 11 – ಕಚ್ಚಾ ಸೋಯಾ ಬೀನ್ ಹಾಗೂ ಸೂರ್ಯಕಾಂತಿ ಎಣ್ಣೆಗಳ ಆಮದಿನ ಮೇಲಿನ ಮೂಲ ಸುಂಕ ಹಾಗೂ ಕೃಷಿ ಅಭಿವೃದ್ಧಿ ಸುಂಕವನ್ನು ತೆರವುಗೊಳಿಸಲಾಗಿದೆ. ಜೂನ್ 30ರವರೆಗೆ ಈ ವಿನಾಯಿತಿ ಜಾರಿಯಲ್ಲಿರಲಿದೆ.

2022-23ರ ಹಣಕಾಸು ವರ್ಷದ ತೆರಿಗೆ ದರ ಮಿತಿಯ ಅನ್ವಯ ವಿನಾಯಿತಿ ಲಭ್ಯವಾಗಲಿದೆ. ನಿರ್ದಿಷ್ಟ ಮಟ್ಟದ ಆಮದಿಗೆ ಮಾತ್ರ ವಿನಾಯಿತಿ ದೊರೆಯಲಿದೆ. ನಂತರದಲ್ಲಿ ಮತ್ತೆ ಆಮದು ಸುಂಕ ವಿಧಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

## ರೈಲ್ವೆಯಲ್ಲಿ ಅಗ್ನಿವೀರರಿಗೆ ಮೀಸಲಾತಿ

ನವದೆಹಲಿ, ಮೇ 11 – ಗೆಜೆಟೇತರ ಹುದ್ದೆಗಳಲ್ಲಿ ಅಗ್ನಿವೀರರಿಗೆ ಶೇ.15ರಷ್ಟು ಮೀಸಲಾತಿ ಕಲ್ಪಿಸಲಾಗುವುದು. ಅಗ್ನಿವೀರರಿಗೆ ವಯೋಮಾನ ಸಡಿಲಿಕೆ ಹಾಗೂ ದೈಹಿಕ ಸಾಮರ್ಥ್ಯದ ಪರೀಕ್ಷೆಗಳಿಂದ ವಿನಾಯಿತಿ ನೀಡಲಾಗುವುದು ಎಂದು ರೈಲ್ವೆ ಮೂಲಗಳು ತಿಳಿಸಿವೆ.

ರೈಲ್ವೆ ರಕ್ಷಣಾ ಪಡೆಯಲ್ಲೂ ಅಗ್ನಿವೀರರಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ ನೀತಿ ರೂಪಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ. ಮೊದಲ ಹಂತದ ರೈಲ್ವೆ ಹುದ್ದೆಗಳಲ್ಲಿ ಶೇ.10, ಎರಡನೇ ಹಂತ ಹಾಗೂ ಅದಕ್ಕೂ ಉನ್ನತ ಗೆಜೆಟೇತರ ಹಂತಗಳಲ್ಲಿ ಶೇ.5ರ (5ನೇ ಪುಟಕ್ಕೆ)

## ಭ್ರಷ್ಟಾಚಾರದ ವಿರುದ್ಧ ಕ್ರಮಕ್ಕಾಗಿ ಪೈಲಟ್ ಪಾದಯಾತ್ರೆ

ಜೈಪುರ್, ಮೇ 11 – ರಾಜಸ್ಥಾನದ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಅಶೋಕ್ ಗೆಹ್ಲೋಟ್ ನೇತೃತ್ವದ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿರುವ ಭಿನ್ನಮತೀಯ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್, ಅಜ್ಮೀರದಿಂದ ಜೈಪುರದವರೆಗೆ 125 ಕಿ.ಮೀ.ಗಳ ಪಾದಯಾತ್ರೆ ಆರಂಭಿಸಿದ್ದಾರೆ.

ಕಳೆದ ತಿಂಗಳಷ್ಟೇ ಪೈಲಟ್ ಅವರು ಸರ್ಕಾರದ ವಿರುದ್ಧ ದಿನವಿಡೀ ಉಪವಾಸ ನಡೆಸಿದ್ದರು. ಈಗ ಮತ್ತೆ ತಮ್ಮ ಪಕ್ಷದ ಸರ್ಕಾರದ ವಿರುದ್ಧವೇ ಪಾದಯಾತ್ರೆ ನಡೆಸುತ್ತಿದ್ದಾರೆ. ಈ ವರ್ಷದ ಅಂತ್ಯದಲ್ಲಿ ವಿಧಾನಸಭಾ ಚುನಾವಣೆ (5ನೇ ಪುಟಕ್ಕೆ)

## ನ್ಯಾಯಾಧೀಶರಿಗೆ ಜಿಲ್ಲಾ ವಕೀಲರ ಸಂಘದಿಂದ ಬೀಳ್ಕೊಡುಗೆ

ದಾವಣಗೆರೆ, ಮೇ 11- ಜಿಲ್ಲಾ ವಕೀಲರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ವರ್ಗಾವಣೆಗೊಂಡ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರೂ, ಸಿಜೆಎಂನ ನ್ಯಾಯಾಧೀಶರಾದ ಶ್ರೀಮತಿ ಪ್ರೀತಿ ಸದ್ಗುರು ಸದರಜೋಶಿ , ಹಿರಿಯ ಸಿವಿಲ್ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ ನಾಯಕ್ ಹಾಗೂ ವಯೋ ನಿವೃತ್ತಿಯಾದ ಜಿಲ್ಲಾ ಸರ್ಕಾರಿ ಅಭಿಯೋಜಕರಾದ ಕೆ. ಕೆಂಚಪ್ಪ ಅವರನ್ನು ಜಿಲ್ಲಾ ವಕೀಲರ ಸಂಘದ ವತಿಯಿಂದ ಬೀಳ್ಕೊಡಲಾಯಿತು.

ಗೌರವ ಸ್ವೀಕರಿಸಿ ಮಾತನಾಡಿದ ನ್ಯಾಯಾಧೀಶರಾದ ಪ್ರವೀಣ ನಾಯಕ್ ಮಾತನಾಡಿ, ಕರ್ನಾಟಕದ ಭೂಪಟವನ್ನು ಗಮನಿಸಿದಾಗ ಭೌಗೋಳಿಕವಾಗಿ ರಾಜ್ಯದ ಕೇಂದ್ರ ಬಿಂದು ದಾವಣಗೆರೆ ರಾಜಧಾನಿಯಾಗಬೇಕಿತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊರೊನಾ ಸಂದರ್ಭದಲ್ಲಿ ಒಂದು ವರ್ಷ ಕಾಲ ವಕೀಲರು ಮತ್ತು ನ್ಯಾಯಾಧೀಶರು ಪರಸ್ಪರ ನೋಡಲು, ಮಾತನಾಡಲು ಆಗದಂತಹ ವಾತಾವರಣ ನಿರ್ಮಾಣವಾಗಿತ್ತು. ನಂತರದ ದಿನಗಳಲ್ಲಿ ಆತ್ಮೀಯತೆ, ಪ್ರೀತಿ, ವಿಶ್ವಾಸದಿಂದ ವಕೀಲರೆಲ್ಲರೂ ಒಂದೇ ಕುಟುಂಬದ ಸದಸ್ಯರ ರೀತಿಯಲ್ಲಿ ನಡೆದುಕೊಂಡು ಬಂದಿದ್ದೇವೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿದ್ದ ಕಾರಣ ನ್ಯಾಯಾಲಯದಲ್ಲಿ ಸಮರ್ಪಕವಾಗಿ ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಆದರೂ ನನ್ನ ಪ್ರಾಮಾಣಿಕ ಸೇವೆಗೆ ತಾವು ತೋರಿದ ಅಭಿಮಾನ, ಪ್ರೀತಿ, ವಿಶ್ವಾಸಕ್ಕೆ ಚಿರಋಣಿಯಾಗಿದ್ದೇನೆ ಎಂದು ಹೇಳಿದರು.

ಹಿರಿಯ ಸಿವಿಲ್ ಹಾಗೂ ಸಿಜೆಎಂ ನ್ಯಾಯಾಧೀಶರಾದ



ಶ್ರೀಮತಿ ಪ್ರೀತಿ ಎಸ್. ಸದರಜೋಶಿ ಮಾತನಾಡಿ, ರಾಜ್ಯದ ಯಾವುದೇ ಜಿಲ್ಲೆಗೆ ಹೋಗಲಿ ದಾವಣಗೆರೆಯನ್ನು ಹಾಗೂ ಇಲ್ಲಿನ ವಕೀಲರ ಸಮೂಹವನ್ನು ಮರೆಯಲು ಸಾಧ್ಯವಿಲ್ಲ. ನ್ಯಾಯಾಂಗ ಇಲಾಖೆಯಲ್ಲಿ ಉತ್ತಮ ಅನುಭವಗಳಾಗಿದ್ದು, ಸೇವೆ ಮಾಡಲು ಅವಕಾಶ ನೀಡಿರುವುದನ್ನು ಸ್ಮರಿಸಿದರು.

ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಟಿ. ಹೆಚ್. ಸಿದ್ದಪ್ಪ ಲೋಕಿಕೆರೆ, ಡಿ.ಪಿ. ಬಸವರಾಜ್, ಆಂಜನೇಯ ಗುರೂಜಿ, ರಿಜ್ವಿಖಾನ್, ಮಲ್ಲಿಕಾರ್ಜುನಪ್ಪ ಗುಮ್ಮನೂರು, ಎಸ್. ಪರಮೇಶ್ ಆವರಗೆರೆ, ಲಕ್ಕಪ್ಪ ಮತ್ತಿತರರು ವರ್ಗಾವಣೆಗೊಂಡ ನ್ಯಾಯಾಧೀಶರು ಮತ್ತು ನಿವೃತ್ತಿಯಾದ ಸರ್ಕಾರಿ ಅಭಿಯೋಜಕರ ಸೇವೆಯನ್ನು ಕೊಂಡಾಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್ ಕುಮಾರ್, ಮಲ್ಲಿಕಾರ್ಜುನ್, ನಾಝಿಯಾ ಕೌಸರ್, ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್, ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್, ಆರ್. ಭಾಗ್ಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

# ಅಗತ್ಯ ಪ್ರಮಾಣದ ಗುಣಮಟ್ಟದ ಆಹಾರ ಪ್ರತಿ ಜೀವಿಯ ಹಕ್ಕು..!

ಆಹಾರ ಪ್ರತಿ ಜೀವಿಯ ಮೂಲ ಭೂತ ಅಗತ್ಯ. ಅದೇ ವಿಕಾಸದ ಮೂಲ ಸೆಲೆ. ಭೂಗೋಳದಲ್ಲಿ ಜೀವಿಗಳ ಅಲೆದಾಟವು ಆಹಾರಕ್ಕಾಗಿ ನಿರಂತರವಾಗಿ ನಡೆದಿದೆ. ಇಂದಿಗೂ ನಮ್ಮೆಲ್ಲ ಚಟುವಟಿಕೆಗಳು ಈ ಆಹಾರವನ್ನೇ ಕೇಂದ್ರೀಕರಿಸಿಕೊಂಡು ಪರಿಗಣಿಸಲ್ಪಟ್ಟಿದೆ. ಈ ಹುಡುಕಾಟದಲ್ಲಿ ಜೀವಿಗಳು ವಿಕಾಸದ ಹಾದಿಯನ್ನು ಬಲು ದೂರ ಕ್ರಮಿಸಿ ಬಂದಿವೆ. ಏಕಕೋಶ ಜೀವಿಗಳಿಂದ ಈಗ ಅತ್ಯಂತ ಸಂಕೀರ್ಣ ಬಹುಕೋಶ ಜೀವಿಗಳು ಜೀವ ಜಗತ್ತನ್ನು ಪ್ರಸ್ತುತ ತುಂಬಿಕೊಂಡಿವೆ. ಸರಿಯಾದ ಸಮಯಕ್ಕೆ ಅಗತ್ಯವಿದ್ದಷ್ಟು ಆಹಾರ ಸಿಗದ ಕಾರಣ ಅನೇಕ ಜೀವ ಸಂಕುಲವೇ ನಾಶವಾಗಿರುವ ಇತಿಹಾಸವಿದೆ.

ಪ್ರಸ್ತುತ ನಾಗರಿಕ ಸಮಾಜದಲ್ಲಿ ಈ 21ನೇ ಶತಮಾನದಲ್ಲಿ ಆಹಾರ ಪ್ರತಿಯೊಬ್ಬರ ಹಕ್ಕು. ಅಗತ್ಯ ಪ್ರಮಾಣ ಹಾಗೂ ಗುಣಮಟ್ಟದ ಆಹಾರವು ಪ್ರತಿ ಜೀವಿಗೂ ಸಿಗಬೇಕು. ಈ ಆಧುನಿಕ ಸಮಾಜದಲ್ಲಿ ಅದು ಮರೀಚಿಕೆಯಾಗಿದೆ. ಮೋಸದ ವ್ಯಾಪಾರದ ಸುಳಿಗಳಿಂದಾಗಿ ಆಹಾರ ಸಾಮಗ್ರಿಗಳೆಲ್ಲ ಕಲುಷಿತಗೊಂಡಿವೆ.

ಹೆಚ್ಚಾಗಿರುವ ಜನಸಂಖ್ಯೆಯು ಈ ಕಲಬೆರಕೆಗೆ ಕಾರಣ. ಬೆಲೆ ಹೆಚ್ಚಳದ ಹೊರೆ ಬಹುಸಂಖ್ಯಾತರಿಗೆ ತಾಳಿಕೊಳ್ಳಲು ಕಷ್ಟ ಸಾಧ್ಯ. ಈ ಪರಿಸ್ಥಿತಿಯ ದುರ್ಬಳಕೆ ಮಾಡಿಕೊಳ್ಳುವ ವ್ಯಕ್ತಿಗಳಿಗೆ ತಿಳಿ ಹೇಳುವವರಾರು? ಇದು ರಸ್ತೆಬದಿಯ ಆಹಾರದ ಅಂಗಡಿಗಳಿಂದಿಡಿದು ದೊಡ್ಡ ದೊಡ್ಡ ಹೋಟೆಲ್‌ಗಳನ್ನೂ ಬಿಟ್ಟಿಲ್ಲ. ಅಡುಗೆ ಎಣ್ಣೆಯಲ್ಲಿ, ಅಕ್ಕಿ, ಬೇಳೆಗಳಲ್ಲಿ ಕಲಬೆರಕೆ ವಸ್ತುಗಳು ಕಂಡುಬರುತ್ತಿವೆ.

ಈ ಕಲಬೆರಕೆ ಆಹಾರದ ಬಳಕೆ ಎಲ್ಲರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ನಿಚ್ಚಳವಾಗಿ ಕಾಣುತ್ತಿದೆ. ಔಷಧಿ ಬಳಸದ ದಿನವಿಲ್ಲ, ಔಷಧಿ ಸೇವನೆ ಇರದ ಕುಟುಂಬ ಇಲ್ಲ. ಔಷಧಿ ಅಂಗಡಿಗಳು ಬೀದಿಗೊಂದು ಬಂದು, ಆಸ್ಪತ್ರೆಗಳು ಹೆಚ್ಚಾಗುತ್ತಿರುವುದು ಯಾವುದೇ ಆರೋಗ್ಯವಂತ ಸಮಾಜದ ಲಕ್ಷಣವಲ್ಲ.



'ಕಲಬೆರಕೆ ಆಹಾರದ ಬಳಕೆ ಎಲ್ಲರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಔಷಧಿ ಬಳಸದ ದಿನವಿಲ್ಲ, ಔಷಧಿ ಸೇವನೆ ಇರದ ಕುಟುಂಬ ಇಲ್ಲ. ಔಷಧಿ ಅಂಗಡಿಗಳು ಬೀದಿಗೊಂದು ಬಂದು, ಆಸ್ಪತ್ರೆಗಳು ಹೆಚ್ಚಾಗುತ್ತಿರುವುದು ಯಾವುದೇ ಆರೋಗ್ಯವಂತ ಸಮಾಜದ ಲಕ್ಷಣವಲ್ಲ..!'

ಇದು ಒಂದು ಮುಖವಾದರೆ, ಇನ್ನೊಂದು ವಿನಾಶಕಾರಿ ಸನ್ನಿವೇಶ ಇರುವುದು ಆಹಾರದ ಉತ್ಪಾದನೆಯ ಮೂಲದಲ್ಲಿ. ಆಹಾರದ ಸುರಕ್ಷತೆಯನ್ನು ಹೆಚ್ಚುತ್ತಿರುವ ಜನಸಂಖ್ಯೆಗೆ ಒದಗಿಸುವುದು ಬೃಹತ್ ಸವಾಲೇ ಸರಿ. ಆಹಾರ ಉತ್ಪಾದನಾ ಕ್ಷೇತ್ರವಾದ ಕೃಷಿ ವಲಯದಲ್ಲಿ ವಿಷ ವಸ್ತುಗಳ ಬಳಕೆ ಹೇರಳವಾಗಿದೆ.

ಉಪನಿಷತ್ತೊಂದರ ನುಡಿ 'ಅನ್ನಂ ಬಹುಕುರ್ವೀತಾ' ಅರ್ಥಾತ್ ಅನ್ನ, ಅಂದರೆ ಆಹಾರವನ್ನು (ಆಹಾರದ ವೈವಿಧ್ಯತೆಯನ್ನು) ಹೆಚ್ಚಿಸೋಣ ಎಂಬುದಾಗಿದೆ. ಈ ನುಡಿಯ ಸಾರ ಚೈತನ್ಯದಂತೆ ನಮ್ಮ ಬಹುಮುಖಿ ಆಹಾರ ಸಂಸ್ಕೃತಿಯನ್ನು ಮರುಕಳಿಸಿ, ಉಳಿಸಿಕೊಳ್ಳಬೇಕು.

'ಶ್ರಮದಲ್ಲಿ ಅದ್ದಿದ ದೇಹ, ಶಾಂತಿಯಲ್ಲಿ ಮುಳುಗಿದ ಮನಸ್ಸು' ಇವು ಆರೋಗ್ಯದ ಗುಟ್ಟು. ಪರಿಶ್ರಮದಿಂದ ದುಡಿದ ದೇಹಕ್ಕೆ ಗುಣಮಟ್ಟದ ಆಹಾರವೇ ಅತ್ಯಮೂಲ್ಯ. ಈ ಬಗೆಯ ಆರೋಗ್ಯವಂತ ದೇಹ ಶಾಂತಿಯ ನೆಲೆವೀಡಾಗುವುದು ಸುಲಭ ಸಾಧ್ಯ. ಸದೃಢ ದೇಹ, ಸುಸ್ಥಿರ ಮನಸ್ಸು ಎರಡಕ್ಕೂ ನಿಕಟ ಸಂಬಂಧವಿದೆ. ನಾವು ಉತ್ಪಾದಿಸುವ ಆಹಾರವು ಆರೋಗ್ಯದ ಸುರಕ್ಷತೆಯನ್ನು ಗ್ಯಾರಂಟಿಗೊಳಿಸಬೇಕು.

ಈ ನಿಟ್ಟಿನಲ್ಲಿ ನಾಗರಿಕರಾಗಿ ನಾವು ಕೆಲವು ಕರ್ತವ್ಯಗಳನ್ನು ನಿಭಾಯಿಸಬೇಕಾಗು ತ್ತದೆ. ಸಾವಯವ ಆಹಾರ ಬೆಳೆಯುವ ರೈತರಿಗೆ ನಾವೆಲ್ಲರೂ ನಿಜಾರ್ಥದಲ್ಲಿ ಉತ್ತೇಜನ ನೀಡಿ, ಆ ಪದಾರ್ಥಗಳನ್ನು ಕೊಂಡು ಬಳಸಬೇಕು. ಹೀಗೆ ಸಾವಯವ ಆಹಾರಕ್ಕೆ ಬೇಡಿಕೆ ಹೆಚ್ಚಾಗಬೇಕು. ಹಾಗೆಯೇ, ಸಾಧ್ಯವಾದೆಡೆಯಲ್ಲೆಲ್ಲ ಕೆಲವು ತರಕಾರಿ, ಸೊಪ್ಪು, ಹಣ್ಣುಗಳನ್ನು ಮನೆಯ ತಾರಸಿಯ ಸ್ಥಳಾವಕಾಶಗಳಲ್ಲಿ ಬೆಳೆಯಲು ನಗರದ ನಾಗರಿಕರು ಪ್ರಯತ್ನಿಸಬೇಕು.

**ಡಾ. ದೇವರಾಜ ಟಿ.ಎನ್.**
ಹಿರಿಯ ವಿಜ್ಞಾನಿ
**ಹೆಚ್. ಎಂ. ಸಣ್ಣಗೌಡ್ರ**
ಮಣ್ಣು ವಿಜ್ಞಾನಿ, ಐಸಿಎಆರ್-
ತರಳಬಾಳು ಕೃಷಿ ವಿಜ್ಞಾನ ಕೇಂದ್ರ,
ದಾವಣಗೆರೆ.

## ಮತ ಯಂತ್ರಗಳನ್ನು ದಕ್ಷಿಣ ಆಫ್ರಿಕಾದಲ್ಲಿ ಬಳಸಿರಲಿಲ್ಲ

### ಸುಳ್ಳು ಮಾಹಿತಿಯ ಮೂಲವನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಿ ಎಂದು ಕಾಂಗ್ರೆಸ್‌ಗೆ ತಿಳಿಸಿದ ಆಯೋಗ

ನವದೆಹಲಿ, ಮೇ 11 – ಕರ್ನಾಟಕ ವಿಧಾನಸಭಾ ಚುನಾವಣೆಗೆ ಬಳಸಲಾದ ಮತಯಂತ್ರಗಳನ್ನು ಈ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಬಳಸಲಾಗಿತ್ತು ಎಂಬ ಕಾಂಗ್ರೆಸ್ ಆರೋಪವನ್ನು ತಳ್ಳಿ ಹಾಕಿರುವ ಚುನಾವಣಾ ಆಯೋಗ, ಈ ತಪ್ಪು ಮಾಹಿತಿ ಹರಡಿದ ಮೂಲವನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸುವಂತೆ ಕೇಳಿದೆ. ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾಗೆ ಪತ್ರ ಬರೆದಿರುವ ಚುನಾವಣಾ ಆಯೋಗ, ಕರ್ನಾಟಕದ ಚುನಾವಣೆಗಾಗಿ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಉತ್ಪಾದಿಸಿದ ಹೊಸ ಮತಯಂತ್ರಗಳನ್ನು ಬಳಸಲಾಗಿದೆ ಎಂದು ಹೇಳಿದೆ.

ಮೇ 8ರಂದು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದ ಕಾಂಗ್ರೆಸ್, ಈ ಹಿಂದೆ ದಕ್ಷಿಣ ಆಫ್ರಿಕಾದಲ್ಲಿ ಬಳಸಲಾದ ಮತಯಂತ್ರಗಳನ್ನೇ ಕರ್ನಾಟಕದ ಚುನಾವಣೆಯಲ್ಲಿ ಮರು ಬಳಕೆ ಮಾಡಲಾಗಿದೆ ಎಂಬ ಕಳವಳ ವ್ಯಕ್ತಪಡಿಸಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿತ್ತು.

ಮತಯಂತ್ರಗಳನ್ನು ದಕ್ಷಿಣ ಆಫ್ರಿಕಾಗೆ ಕಳಿಸಿರಲಿಲ್ಲ. ಆ ದೇಶ ಇಂತಹ ಯಂತ್ರಗಳನ್ನೂ ಬಳಸುವುದೂ ಇಲ್ಲ ಎಂದು ಚುನಾವಣಾ ಆಯೋಗ ಹೇಳಿದೆ. ಮತಯಂತ್ರಗಳ ಸಾಗಣೆ ಹಾಗೂ ಅಳವಡಿಕೆಯ ಪ್ರತಿಯೊಂದು ಹಂತದಲ್ಲಿ ಕಾಂಗ್ರೆಸ್ ಪ್ರತಿನಿಧಿಗಳು ಭಾಗಿಯಾಗಿದ್ದರು. ಈ ರೀತಿಯ ಸುಳ್ಳು ಮಾಹಿತಿಯ ಮೂಲಗಳಿಂದ ಗಾಳಿ ಸುದ್ದಿ ಹರಡುತ್ತವೆ. ಇವುಗಳನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಬೇಕಿದೆ. ಈ ಬಗ್ಗೆ ಕಾಂಗ್ರೆಸ್ ಪಕ್ಷ ಮೇ 15ರ ಸಂಜೆ 5ರ ಒಳಗೆ ಕ್ರಮ ತೆಗೆದುಕೊಂಡಿದ್ದನ್ನು ಖಚಿತ ಪಡಿಸಬೇಕು ಎಂದು ಆಯೋಗ ತಿಳಿಸಿದೆ.

# ಮಕ್ಕಳಲ್ಲಿ ನಾಯಕತ್ವದ ಗುಣ ಬೆಳೆಸಲು ಬೇಸಿಗೆ ಶಿಬಿರಗಳು ಅಗತ್ಯ: ಕೊಟ್ರೇಶ್

ದಾವಣಗೆರೆ, ಮೇ 11- ನಾಯಕತ್ವ, ಸೇವಾ ಮನೋಭಾವನೆ, ಶಿಸ್ತು ಮೂಡಿಸಲು ಬೇಸಿಗೆ ಶಿಬಿರಗಳು ಅಗತ್ಯ ಎಂದು ಎ.ಕೆ. ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಕೆ.ಬಿ. ಕೊಟ್ರೇಶ್ ಹೇಳಿದರು.

ನಗರದ ಭಾರತ ಸೇವಾದಳ ಕಚೇರಿ ಸಭಾಂಗಣದಲ್ಲಿ ಭಾರತ ಸೇವಾದಳ ಮತ್ತು ಫ್ಲೈಯಿಂಗ್ ಬರ್ಡ್ಸ್ ನೃತ್ಯ ಶಾಲೆ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ, ಸೇವಾದಳ ಸಂಸ್ಥಾಪಕ ಡಾ.ನಾ.ಸು. ಹರ್ಡೀಕರ್ ಮತ್ತು ರಾಷ್ಟ್ರಕವಿ ರವೀಂದ್ರನಾಥ್ ಅವರ ಜಯಂತ್ಯುತ್ಸವ ಸಮಾರಂಭದಲ್ಲಿ ಸಮಾರೋಪ ಭಾಷಣ ಮಾಡಿದರು.

ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಕಲಿಸುವ ಈಜು, ನೃತ್ಯ, ಕರಾಟೆ, ಯೋಗ, ಚಿತ್ರಕಲೆ, ಪ್ರವಾಸ ಇತರೆ ಚಟುವಟಿಕೆಗಳು ಮಕ್ಕಳಲ್ಲಿ ಸಂತೋಷ, ಆತ್ಮವಿಶ್ವಾಸವನ್ನು ಮೂಡಿಸುತ್ತವೆ ಎಂದರು.



ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಹೆಚ್. ಚನ್ನಪ್ಪ ಪಲ್ಲಾಗಟ್ಟೆ ಮಾತನಾಡಿ, ವಾರ್ಷಿಕ ಪರೀಕ್ಷೆಗಳು ಮುಗಿದು ಶಾಲೆಗಳಿಗೆ ರಜೆ ನೀಡಿದ ಸಂದರ್ಭದಲ್ಲಿ ಮಕ್ಕಳಿಗಾಗಿ ಏರ್ಪಡಿಸುವ ಬೇಸಿಗೆ ಶಿಬಿರಗಳು ಹೆಚ್ಚು ಸಹಕಾರಿಯಾಗುತ್ತವೆ ಎಂದರು.

ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಿ. ಪರಮೇಶ್ವರಪ್ಪ, ಎ. ಸಿದ್ದಲಿಂಗಪ್ಪ ಅವರು ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ಮೆಡಲ್ ಪ್ರದಾನ ಮಾಡಿದರು. ವಲಯ ಸಂಘಟಕ ಎಂ. ಅಣ್ಣಪ್ಪ ಸ್ವಾಗತಿಸಿದರು. ಪರಶುರಾಮ್ ಖಟಾವ್ಕರ್ ವರದಿ ವಾಚನ ಮಾಡಿದರು. ಶ್ರೀಮತಿ ಶೈಲಜಾ ಪಿ.ಕೆ. ನಿರೂಪಿಸಿದರು. ಶ್ರೀಕಾಂತ್ ಕೆ.ಪಿ. ವಂದಿಸಿದರು.

ಮಕ್ಕಳಿಂದ ಯೋಗ, ಕರಾಟೆ, ನೃತ್ಯ, ನಾಟಕ ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

## ಲೋಕಸಭಾ ಚುನಾವಣೆಯಲ್ಲಿ ಬಿ.ಜೆ.ಡಿ. ಏಕಾಂಗಿ ಸ್ಪರ್ಧೆ

ನವದೆಹಲಿ, ಮೇ 11 – ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಬಿಜು ಜನತಾ ದಳ (ಬಿ.ಜೆ.ಡಿ.)ದ ನಾಯಕ ಹಾಗೂ ಒಡಿಶಾ ಮುಖ್ಯಮಂತ್ರಿ ನವೀನ್ ಪಾಟ್ನಾಯಕ್ ತಿಳಿಸಿದ್ದಾರೆ.

ಪ್ರತಿಪಕ್ಷಗಳಲ್ಲಿ ಒಗ್ಗಟ್ಟು ತರಲು ಪ್ರಯತ್ನ ನಡೆಸುತ್ತಿರುವ ಜೆಡಿಯು ನಾಯಕ ಹಾಗೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇತ್ತೀಚೆಗೆ ಪಾಟ್ನಾಯಕ್ ಭೇಟಿ ಮಾಡಿದ್ದರು.

ಗುರುವಾರದಂದು ಒಡಿಶಾ ಅಭಿವೃದ್ಧಿ ವಿಷಯಗಳ ಕುರಿತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಪಾಟ್ನಾಯಕ್ ಭೇಟಿ ಮಾಡಿದ್ದರು. ನಂತರ ಮಾತನಾಡಿರುವ ಅವರು, ಪ್ರಾಂತೀಯ ಪಕ್ಷಗಳ ಒಕ್ಕೂಟ ಸೇರುವುದಿಲ್ಲ ಎಂದಿದ್ದಾರೆ. ಕಾಂಗ್ರೆಸ್ ಹಾಗೂ ಬಿಜೆಪಿ ಎರಡರಿಂದಲೂ ಸಮಾನ ಅಂತರ ಕಾಯ್ದುಕೊಳ್ಳುವುದು ಬಿ.ಜೆ.ಡಿ. ನಿಲುವಾಗಿದೆ ಎಂದು ಪಾಟ್ನಾಯಕ್ ತಿಳಿಸಿದ್ದಾರೆ.

# ವಿನೋಬನಗರದ ಮದ್ಯದಂಗಡಿ ಸ್ಥಳಾಂತರಕ್ಕೆ ಮನವಿ

ದಾವಣಗೆರೆ,ಮೇ 11- ಸ್ಥಳೀಯ ವಿನೋಬನಗರದ 4ನೇ ಮುಖ್ಯ ರಸ್ತೆಯಲ್ಲಿರುವ ಕೆ.ಎಸ್. ವೈನ್‌ಲ್ಯಾಂಡ್ ಎಂಬ ಹೆಸರಿನ ಮದ್ಯದ ಅಂಗಡಿಯಲ್ಲಿ ಪರವಾನಗಿ ಷರತ್ತನ್ನು ಉಲ್ಲಂಘಿಸಿ ಮದ್ಯ ಸೇವನೆಗೆ ಅವಕಾಶ ನೀಡಲಾಗುತ್ತಿದೆ ಇದರಿಂದಾಗಿ ಅಕ್ಕ-ಪಕ್ಕದ ನಾಗರಿಕರಿಗೆ ತೊಂದರೆ ಆಗುತ್ತಿದೆ. ಕೂಡಲೇ ಈ ಮದ್ಯದಂಗಡಿಯನ್ನು ಸ್ಥಳಾಂತರಿಸುವಂತೆ ಅಬಕಾರಿ ಇಲಾಖೆ ಉಪ ಆಯುಕ್ತರಿಗೆ ಅಲ್ಲಿನ ಮಹಿಳೆಯರು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.



ಮದ್ಯ ಸೇವನೆಗೆ ಬರುವ ಜನರು ತಮ್ಮ ವಾಹನಗಳನ್ನು 3 ಮತ್ತು 4ನೇ ಕ್ರಾಸ್‌ನಲ್ಲಿರುವ ಮನೆ ಮುಂದೆ ನಿಲ್ಲಿಸುತ್ತಾರೆ. ಮಹಿಳೆಯರು ವಾಹನ ತೆಗೆಯಿರಿ ಎಂದರೆ ಜಗಳಕ್ಕೇ ನಿಲ್ಲುತ್ತಾರೆ.

ಮದ್ಯಸೇವನೆ ಮಾಡಿ ಎಚ್ಚರವಿಲ್ಲದೆ ಮನೆಯ ಬಾಗಿಲ ಮುಂದೆಯೇ ಮೂತ್ರ ಮಾಡುತ್ತಾರೆ. ಅಲ್ಲದೇ ವಾಂತಿ ಹಾಗೂ ಉಗುಳುವುದು ಮಾಡುತ್ತಾರೆ. ಪರಸ್ಪರ ಹೊಡೆದಾಡಿಕೊಳ್ಳುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗಿದೆ. ನೆಮ್ಮದಿಯಿಂದ ಇರಲು ಆಗುತ್ತಿಲ್ಲ.

ಈ ಮದ್ಯದ ಅಂಗಡಿ 30 ವರ್ಷಗಳ ಹಿಂದೆ ತೆರೆದಿದ್ದು, ಆಗ ಇಲ್ಲಿ ವಾಸದ ಮನೆಗಳು ಇರಲಿಲ್ಲ. ಈಗ ಬಹಳಷ್ಟು ಮನೆಗಳು ಇವೆ. ಹಾಗಾಗಿ ಮಕ್ಕಳಿಗೆ, ವಯಸ್ಕರರಿಗೆ, ಕಾಯಿಲೆ ಇರುವವರಿಗೆ ಮಾನಸಿಕ ಹಿಂಸೆಯಾಗುತ್ತಿದೆ.

ಹಾಗಾಗಿ ಈ ಮದ್ಯದಂಗಡಿಯನ್ನು ಸ್ಥಳಾಂತರಿಸುವಂತೆ ಅವರು ಒತ್ತಾಯಿಸಿದ್ದಾರೆ.

ಈ ಸಂಬಂಧ ಅಲ್ಲಿನ ನಿವಾಸಿ ಸೈಯದ್ ಸೈಫುಲ್ಲಾ ಸಹ ಪೋಲಿಸರಿಗೆ ದೂರು ಸಲ್ಲಿಸಿದ್ದರು. ಆಗ ಬಾರ್ ಮಾಲಿಕರು ಆರು ತಿಂಗಳ ಕಾಲಾವಕಾಶ ನೀಡಿ, ಬಾರ್ ಅನ್ನು ಸ್ಥಳಾಂತರಿಸಲಾಗುವುದು ಎಂದು ಮುಚ್ಚಳಿಕೆ ಪತ್ರ ಬರೆದು ಕೊಟ್ಟಿದ್ದರು. ಅವರು ಕೇಳಿದ ಅವಧಿ ಮೀರಿದರೂ ಇನ್ನೂ ಸ್ಥಳಾಂತರಿಸಿರುವುದಿಲ್ಲ ಎಂದು ಸೈಫುಲ್ಲಾ ದೂರಿದ್ದಾರೆ.

# ಕುಂಬಳೂರಿನಲ್ಲಿ ನಾಡಿದ್ದು ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯ ಸುಸಜ್ಜಿತ ಕಟ್ಟಡ ಲೋಕಾರ್ಪಣೆ

ಮಲೇಬೆನ್ನೂರು, ಮೇ 11- ಕುಂಬಳೂರು ಸಮೀಪ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಮಲೇಬೆನ್ನೂರಿನ ಎಸ್.ಡಿ.ಎಲ್ ಎಜುಕೇಷನಲ್ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯ ನೂತನ ಕಟ್ಟಡವನ್ನು ಇದೇ ದಿನಾಂಕ 14ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸಿರಿಗೆರೆ ಬೃಹನ್ಮಠದ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಲಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಚಿಟ್ಟಕ್ಕಿ ರಮೇಶ್ ತಿಳಿಸಿದ್ದಾರೆ.

ಅವರು ಗುರುವಾರ ಶಾಲೆಯ ನೂತನ ಕಟ್ಟಡದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಅವರು ಆಗಮಿಸಲಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಜುಕೇಷನಲ್ ಟ್ರಸ್ಟ್‌ನ ಗೌರವಾಧ್ಯಕ್ಷ ಚಿಟ್ಟಕ್ಕಿ ಬಸವರಾಜಪ್ಪ ವಹಿಸಲಿದ್ದು, ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಎಸ್ಪಿ ಡಾ.ಕೆ.ಅರುಣ್, ಕರ್ನಾಟಕ ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕ ಹಯವದನ ಉಪಾಧ್ಯಾಯ, ಡಿಡಿಪಿಐ ಜಿ.ಆರ್.ತಿಪ್ಪೇಶಪ್ಪ, ಬಿಇಓ ಎಂ.ಹನುಮಂತಪ್ಪ ಇವರುಗಳು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

**ಉದ್ದೇಶ :** ಈ ಭಾಗದಲ್ಲಿ ಸಿಬಿಎಸ್‌ಸಿ ಶಾಲೆ ಕೊರತೆಯ ಹಿನ್ನೆಲೆಯಲ್ಲಿ ಮಕ್ಕಳನ್ನು ಓದಿಸುವುದಕ್ಕಾಗಿಯೇ ನಮ್ಮ ಭಾಗದ ರೈತರು ದಾವಣಗೆರೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರು. ಇದನ್ನು ಗಮನಿಸಿದ ನಾವು, ಭತ್ತದ ವ್ಯಾಪಾರದಲ್ಲಿ ನಮ್ಮನ್ನು ಬೆಳೆಸಿದ ಮಲೇಬೆನ್ನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತರ ಮಕ್ಕಳಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ಕುಂಬಳೂರು ಬಳಿ 4 ಎಕರೆ ಜಾಗ ಖರೀದಿಸಿ, ಸುಮಾರು 920 ಚದರ ಜಾಗದಲ್ಲಿ ಜಿ+3 ಮಾದರಿಯಲ್ಲಿ ಸುಸಜ್ಜಿತ ಶಾಲಾ ಕಟ್ಟಡವನ್ನು ಕಟ್ಟಿದ್ದೇವೆ. ಜೂನ್ 1 ರಿಂದ ಇಲ್ಲಿ ಎಲ್‌ಕೆಜಿಯಿಂದ 7ನೇ ತರಗತಿವರೆಗೆ ತರಗತಿಗಳು



ಪ್ರಾರಂಭವಾಗಲಿದ್ದು, ಈಗಾಗಲೇ ನಾವು ನಿರೀಕ್ಷೆ ಮಾಡಿದಷ್ಟು ಮಕ್ಕಳನ್ನು ಇಲ್ಲಿಗೆ ಸೇರಿಸಲು ಪೋಷಕರು ಅರ್ಜಿ ಹಾಕಿದ್ದಾರೆ. ಈ ವರ್ಷ ಯಾವುದೇ ಡೊನೇಷನ್ ತೆಗೆದುಕೊಳ್ಳುವುದಿಲ್ಲ. ಶಾಲೆಯ ಕಲಿಕಾ ಶುಲ್ಕವನ್ನು ಮಾತ್ರ ಪಡೆಯಲಾಗುವುದು ಎಂದು ಅವರು ವಿವರಿಸಿದರು.

ಎಸ್‌ಡಿಎಲ್ ಎಜುಕೇಷನಲ್ ಟ್ರಸ್ಟ್‌ನ ಆಡಳಿತಾಧಿಕಾರಿ ಎಸ್.ಕೆ.ಕುಮಾರ್ ಮಾತನಾಡಿ,

### ತರಳಬಾಳು ಜಗದ್ಗುರುಗಳಿಂದ ನೂತನ ಕಟ್ಟಡ ಉದ್ಘಾಟನೆ

ಡಾ.ಗುರುರಾಜ ಕರ್ಜಗಿ ಅವರ ಮಾರ್ಗದರ್ಶನದಲ್ಲೇ ನಮ್ಮ ಶಾಲೆಯ ಶಿಕ್ಷಕರು ಮಕ್ಕಳಿಗೆ ಹೊಸ ಮಾದರಿಯಲ್ಲಿ ಕಲಿಕೆಯ ವಿಧಾನಗಳನ್ನು ಹೇಳಿಕೊಡಲಿದ್ದಾರೆ.

ನೈಪುಣ್ಯ ಹಾಗೂ ವಿಶೇಷ ಕೌಶಲ್ಯ ತರಬೇತಿಗಾಗಿ ಪ್ರತ್ಯೇಕ ಕೊಠಡಿಯನ್ನು ಮತ್ತು ಮಕ್ಕಳ ಆರೋಗ್ಯ ತಪಾಸಣೆಗಾಗಿ ಪ್ರತ್ಯೇಕ ಕೊಠಡಿಯನ್ನು ಮೀಸಲಿಟ್ಟಿದ್ದೇವೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾಗಿ ಯೋಗ, ಸಂಗೀತ, ನೃತ್ಯ, ಕರಾಟೆಯನ್ನು ಕಲಿಸಲಾಗುವುದು. ಪ್ರತಿ ಕೊಠಡಿಯಲ್ಲಿ ಡಿಜಿಟಲ್ ಬೋರ್ಡ್ ಮೂಲಕ ಮಕ್ಕಳಿಗೆ ಶಿಕ್ಷಣ ನೀಡಲಾಗುವುದು. ಶುದ್ಧ ನೀರಿನ ಘಟಕ, ಹೈಟೆಕ್ ಶೌಚಾಲಯ, ಫಿಜಿಕ್ಸ್ ಹಾಗೂ ಸೈನ್ಸ್ ಲ್ಯಾಬ್ ವಸ್ಥೆಯನ್ನು ಮಾಡಿದ್ದೇವೆ ಎಂದು ಕುಮಾರ್ ತಿಳಿಸಿದರು.

ಹತ್ತು ಸಾವಿರ ಪುಸ್ತಕಗಳ ವಿಶೇಷ ಗ್ರಂಥಾಲಯ ಕೊಠಡಿಯನ್ನು ಮಾಡಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಾಗುವುದು.

ನಂದಿ ಅಸೋಸಿಯೇಟ್ಸ್‌ನ ಬಿಸಲೇರಿ ಗಂಗಣ್ಣ ಮಾತನಾಡಿ, ಇದೇ ಮೊದಲ ಬಾರಿಗೆ ವಿಶೇಷ ವಿನ್ಯಾಸದ ಕಟ್ಟಡವನ್ನು ನಿರ್ಮಿಸಿದ್ದು, ಕಟ್ಟಡದ ಸುರಕ್ಷತೆಯ ದೃಷ್ಟಿಯಿಂದ ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದರು.

ಎಜುಕೇಷನಲ್ ಟ್ರಸ್ಟ್‌ನ ಕಾರ್ಯದರ್ಶಿ ಹಾಗೂ ಪುರಸಭೆ ಮಾಜಿ ಸದಸ್ಯ ಮಹಾಂತೇಶ್ ಸ್ವಾಮಿ, ಮಂಜು, ಜಿಗಳಿಯ ಕೆ.ಜಿ.ಬಸವರಾಜ್ ಸುದ್ದಿಗೋಷ್ಠಿಯಲ್ಲಿದ್ದರು.

## ವೈಬಿಎಸ್‌ಜಿ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 11- ಶ್ರೀ ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘದ ಅಡಿಯಲ್ಲಿ ನಡೆಸುತ್ತಿರುವ ಶ್ರೀ ಯಜಮಾನ್ ಬೆಳ್ಳೂಡಿ ಸೋಮಶೇಖರಪ್ಪ ಗೌರಮ್ಮ (ವೈಬಿಎಸ್‌ಜಿ) ಪ್ರೌಢಶಾಲೆಯು ಪ್ರಸಕ್ತ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪ್ರತಿಶತ ಶೇ.100 ಫಲಿತಾಂಶ ಪಡೆದಿದೆ ಎಂದು ಸಂಘದ ಕಾರ್ಯದರ್ಶಿ ತಿಳಿಸಿದ್ದಾರೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಎಲ್. ಕಾಸರೆಡ್ಡಿ ಕ್ಲಾಸ್ ಓನ್ ಕಂಟ್ರ್ಯಾಕ್ಟರ್)
ಮತ್ತು ಕುಟುಂಬ ವರ್ಗದವರ ಸೇವಾರ್ಥ,
ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಎಂಸಿಸಿ ಎ ಬ್ಲಾಕ್ ಪೂರ್ವ 30x50,
ಬನಶಂಕರಿ ಬಡಾವಣೆ ಪಶ್ಚಿಮ 40x78,
(ಅಕ್ಕ-ಪಕ್ಕ) (60 ಅಡಿ ರಸ್ತೆ), ಹೊಸ
ಕುಂದುವಾಡ ಪಶ್ಚಿಮ 30x50
ಐಗೂರು ವಿಜಯಕುಮಾರ್
99457 02495

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು
ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ
ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಡ್ರೈವರ್ ಬೇಕಾಗಿದ್ದಾರೆ**
ನಮ್ಮ ಸ್ವಂತ ವಾಹನ ಡ್ರೈವ್
ಮಾಡಲು ಡ್ರೈವರ್ ಬೇಕಾಗಿದ್ದಾರೆ.
ವಯಸ್ಸು 25ರ ಒಳಗೆ
ಸ್ಥಳ : ಜಯನಗರ, ದಾವಣಗೆರೆ.
89041 64777

**ಕೆಲಸ ಖಾಲಿ ಇದೆ**
PGಯಲ್ಲಿ (ಸ್ವಚ್ಛತಾ)
ಕೆಲಸಕ್ಕೆ ಬೇಕಾಗಿದ್ದಾರೆ.
91102 26782

**ಮನೆ ಲೀಸ್‌ಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್
3ನೇ ಮೇನ್, 3ನೇ ಕ್ರಾಸ್,
ಮಹದೇವಾ ಆಸ್ಪತ್ರೆ ಹತ್ತಿರ, ದಾವಣಗೆರೆ.
88924 86388

**ಬೇಕಾಗಿದ್ದಾರೆ**
ಹೋಟೆಲ್ ಗೆ ಅಡುಗೆ
ಭಟ್ಟರು ಬೇಕಾಗಿದ್ದಾರೆ.
ಫೋ.:
99867 01322

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್
ಹಾಕಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ. ಭಾರತ್ ಪೆಟ್ರೋಲಿಯಂ
ಪೆಟ್ರೋಲ್ ಬಂಕ್ ಐಟಿಐ ಕಾಲೇಜ್
ಎದುರು, ಹದಡಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು
ಹುಡುಗರು ಬೇಕಾಗಿದ್ದಾರೆ.
ಗ್ರಾಮಾಂತರದವರಿಗೂ ಅವಕಾಶವುಂಟು.
ಆಕರ್ಷಕ ವೇತನದೊಂದಿಗೆ ಊಟ
- ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
98442-94446

**ಈಗ ಮನೆಯಿಂದಲೇ ದುಡಿಯಿರಿ**
ನಿಮ್ಮ ದಿನದ 2 ಗಂಟೆ ಉಪಯೋಗಿಸಿಕೊಂಡು
ತಿಂಗಳಿಗೆ ರೂ. 10,000 ದಿಂದ ರೂ.
30,000ಕ್ಕಿಂತ ಹೆಚ್ಚು (Extra) ಆದಾಯ
(Income) ಮಾಡುವ ಅವಕಾಶವಿದೆ.
ಆಸಕ್ತರು ಕೂಡಲೇ ಸಂಪರ್ಕಿಸಿ.
(one call may change your life)
Tejashwini
96112 68004

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**
ವರ್ಕ್ ಫ್ರಮ್ ಹೋಮ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಆಫೀಸ್ ವರ್ಕ್ (ಟೆಲಿಕಾಲಿಂಗ್) (ಪಾರ್ಟ್ ಟೈಂ) (ಫುಲ್ ಟೈಂ) ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ : 18000, 32000.
ವಿದ್ಯಾರ್ಹತೆ : 10ನೇ ತರಗತಿಯಿಂದ
ಪಿಯುಸಿ & ಡಿಗ್ರಿಯವರೆಗೆ .
90082 37715

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ
ಡ್ರೈವರ್ (ಪುರುಷ) ಮತ್ತು
ಕಂಡಕ್ಟರ್ (ಪುರುಷ ಅಥವಾ ಮಹಿಳಾ)
ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
GNM/ ANM ಆಯಾ,
ವಾರ್ಡ್ ಬಾಯ್, ಮ್ಯಾನೇಜರ್,
ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
84312 74911

**EC / ಇಸಿ,**
**E-swathu,**
**Khatha Change**
**Building Licence**
**& Other Property**
**Documents**
96118-66449

**ಕಮರ್ಷಿಯಲ್ ಸೈಟು ಮಾರಾಟಕ್ಕೆ/ಬಾಡಿಗೆಗೆ**
ನಗರದ B. I. E. T. ಕಾಲೇಜು
ರಸ್ತೆಗೆ ಹಾಗೂ ಬಾಪೂಜಿ
ಬ್ಯಾಂಕ್ ಎದುರುಗಡೆ ಇರುವ
Corner Site ಮಾರಾಟಕ್ಕೆ /
ಬಾಡಿಗೆಗೆ ಇದೆ. ಆಸಕ್ತಿ ಇರುವವರು
ನೇರವಾಗಿ ಸಂಪರ್ಕಿಸಿ.
3200 ಚ.ಅಡಿ
ಮೊ.: 97424 34049

**ಸೈಟಿನ ಮೂಲ ಪತ್ರ ಕಳೆದಿದೆ**
ದಾವಣಗೆರೆಯ ನಿಟುವಳ್ಳಿ ಗ್ರಾಮ ಪಂಚಾಯ್ತಿ ರಿ.ಸರ್ವೆ ನಂ. 13-2A ಸೈಟ್ ನಂ. 57, # 778-57ಗೆ ಸಂಬಂಧಿಸಿದ ಶುದ್ಧ ಕ್ರಯಪತ್ರ ಕಳೆದುಹೋಗಿರುತ್ತದೆ. ದಿ. : 27.04.2023ರ ಮಧ್ಯಾಹ್ನ 1.00 ರ ಸುಮಾರು ದಾವಣಗೆರೆ ಹದಡಿ ಗ್ರಾಮದಲ್ಲಿ ಮೇಲ್ಕಂಡ ನಿವೇಶನಕ್ಕೆ ಸಂಬಂಧಿಸಿದ ಮೂಲ ಶುದ್ಧ ಕ್ರಯಪತ್ರ ಕಳೆದು ಹೋಗಿದೆ. ಸಿಕ್ಕವರು ಈ ಫೋನ್‌ಗೆ ತಿಳಿಸಿ.
84969 93112

**ಸೈಟು ಮಾರಾಟಕ್ಕಿವೆ**
ಬಾತಿ ಹತ್ತಿರ,
ಅನ್ನಪೂರ್ಣ ಎನ್‌ಕ್ಲೇವ್,
(30x40) ಉತ್ತರ-ದಕ್ಷಿಣ
ರೂ. 1599/-
70196 18397


**ವಿಕಾಸ್ ಸ್ಪೋಕನ್ ಇಂಗ್ಲಿಷ್ & ಕಂಪ್ಯೂಟರ್ ಕ್ಲಾಸಸ್**
33 ದಿನಗಳಲ್ಲಿ ಕಲಿಯಿರಿ.
ಕಲಿಯದಿದ್ದರೆ ಹಣ ವಾಪಸ್
Contact :
93802 29199
ದಾವಣಗೆರೆ, ಹರಿಹರ

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ : 1) B.Sc
B.Ed (PM):01, 2) B.Sc :01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ
'ಸಿ' ಬ್ಲಾಕ್, SOG ಬಡಾವಣೆ,
ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
87927 02690, 98444 43374

**ಬೇಕಾಗಿದ್ದಾರೆ**
ಪಾರ್ಟ್ ಟೈಂ ಜಾಬ್, ನಿಮ್ಮ
ಮನೆಯಿಂದಲೇ ಬಿಡುವಿನ ವೇಳೆಯಲ್ಲಿ
ದಿನದಲ್ಲಿ 2 ಗಂಟೆ ಟೆಲಿಕಾಲಿಂಗ್ ಕೆಲಸ
ನಿರ್ವಹಿಸಿ ತಿಂಗಳಿಗೆ 10,000/- ದಿಂದ
15000/- ಸಂಪಾದಿಸಿ.
89714 63581, 81055 03664

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ.
ಗಾಂಧಿ ಸರ್ಕಲ್, ದಾವಣಗೆರೆ.
89716 99826

**ತಕ್ಷಣ ಬೇಕಾಗಿದ್ದಾರೆ**
TVS Toyota, ಬ್ರಿಟಾನಿಯಾ, ಟಾಟಾ
ಮೋಟಾರ್ಸ್, ಬಿಗ್ ಬಜಾರ್ಸ್ ಕಂಪನಿಗಳಿಗೆ
ಆಫೀಸ್‌ಗಳಿಗೆ 5th, 7th, 10th, PUC,
Degree ITI, Diploma ಯುವಕ-
ಯುವತಿಯರು ನೇರನೇಮಕಾತಿ ಸಂಬಳ
18,000/-56,000/- ವಸತಿ, ಊಟವಿದೆ.
90355 20339

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ, ಸ್ಖಲನ, ಹಸ್ತ ಮೈಥುನ,
ಸ್ವಪ್ನದೋಷ, ನರಗಳ ದೌರ್ಬಲ್ಯತೆ,
[illegible] ನಾಶ, ಸಂತಾನ ದೋಷ,
ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ: 2 & 3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (R.R.No.3669)
ದಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಹೆಸರು ಸ್ಪಷ್ಟೀಕರಣ**
ಮೈನಮ್ಮ ಕೋಂ. ಮಂಜಪ್ಪ ನ್ಯಾಮತಿ ತಾಲ್ಲೂಕು ಆರುಂಡಿ ಗ್ರಾಮ ವಾಸಿಯಾದ ನಾನು ನನ್ನ ಉಳಿತಾಯ ಖಾತೆ ಕರ್ನಾಟಕ ಬ್ಯಾಂಕ್‌ನಲ್ಲಿ ಮೈನಾವತಿ ಕೋಂ ಮಂಜಪ್ಪ ಹಾಗೂ ಪಾನ್ ಕಾರ್ಡ್‌ನಲ್ಲಿ ಮೈನಾವತಿ ಜೀನಳ್ಳಿ ಬಿನ್ ದೊಡ್ಡಪ್ಪ ಎಂದಾಗಿದ್ದು, ಈ ಮೇಲ್ಕಂಡ ಎಲ್ಲಾ ಹೆಸರುಗಳು ನನ್ನದೇ ಆಗಿದ್ದು, ಇನ್ನು ಮುಂದೆ ಮೈನಮ್ಮ ಕೋಂ ಮಂಜಪ್ಪ ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿನಾಂಕ : 11.5.2023 ರಂದು ನೋಟರಿ ಹೊನ್ನಾಳಿ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ /- ಮೈನಮ್ಮ

**ವಸತಿಯುತ ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ**
Maths - 2, Social - 2
ಊಟ, ವಸತಿ ಸೌಲಭ್ಯವಿದೆ.
SRP ಪ್ರೌಢಶಾಲೆ, 17ನೇ ಕ್ರಾಸ್,
ಆಂಜನೇಯ ಬಡಾವಣೆ, ದಾವಣಗೆರೆ-4.
91645 05229, 91136 31266

**HOUSE FOR LEASE**
Independent house, 3 BHK
5th main, 5th cross,
St. Pauls Convent Road,
PJ extension,
Davangere.
88616 89590

**ಮನೆ ಬಾಡಿಗೆಗಿದೆ**
ದೇವರಾಜ್ ಅರಸ್ 'A' ಬ್ಲಾಕ್‌ನಲ್ಲಿ,
ಮೊದಲನೇ ಮಹಡಿಯಲ್ಲಿ, ಡಬಲ್ ಬೆಡ್
ರೂಂ ಮನೆಯಿದ್ದು ಎಲ್ಲಾ ಸೌಕರ್ಯಗಳನ್ನು
ಹೊಂದಿರುವ ಮನೆ ಬಾಡಿಗೆಗಿದೆ.
ಸಸ್ಯಹಾರಿಗಳಿಗೆ ಆದ್ಯತೆ. ಬ್ರೋಕರ್‌ಗೆ
ಅವಕಾಶವಿಲ್ಲ ಆಸಕ್ತರು ಸಂಪರ್ಕಿಸಿ :
98459 24394

**FOR RENT**
First Floor MCC
'B' Block Boys
Hostel Road,
82177 72482

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು
ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಬೇಕಾಗಿದ್ದಾರೆ**
ಝೆರಾಕ್ಸ್ ಅಂಗಡಿಯಲ್ಲಿ
ಕೆಲಸ ಮಾಡಲು ಬೇಕಾಗಿದ್ದಾರೆ.
ಸ್ಥಳ : ಭಗೀರಥ ಸರ್ಕಲ್,
ಜಯನಗರ. ಸಮಯ :9 ರಿಂದ 7
89041 64777

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ
ಪುಸ್ತಕ ಬರೆಯುವ ಹಾಗೂ ಫಾರಂ
ತುಂಬುವ ಮೂಲಕ ತಿಂಗಳಿಗೆ
15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
87490 98879

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್
ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ವಿದ್ಯಾರ್ಥಿಗಳಿಗೆ ಉಚಿತ ಯೂನಿಫಾರ್ಮ್ ನೀಡಲಾಗುವುದು
ಶ್ರೀ ಗಂಗೋತ್ರಿ ಕಮ್ಯೂನಿಟಿ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013

**WANTED TEACHERS**
B.Sc, B.Ed (PCM) - 2
BA, B.Ed (Social Science) - 2
ACM School
Devarj Urs Layout, 'C' Block,
2nd Cross, Davanagere.
89703 21855, 82965 02675

**Tuition for**
**Supplementary exam**
**SSLC & PUC**
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್, ದಾವಣಗೆರೆ
8861445913 8553278258

**ಅಧಿಕೃತ ಚೀಟಿ ಸಂಸ್ಥೆ**
ರೂ. 100000/- ಚೀಟಿ
ಪ್ರಾರಂಭ ಕಂತುಗಳು, 2000/-
ರಿಂದ 1400/- ರೂ ವರೆಗೆ.
ಸ್ಕಂದ ಚಿಟ್ ಫಂಡ್ಸ್ (ರಿ)
ಸಂಪರ್ಕಿಸಿ :
78997 75159

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ
ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ
ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ.
ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ
1600 ಅಡಿಗಳು. ಸೆಲ್ಲರ್ 2400 ಅಡಿಗಳು
ಸಂಪರ್ಕಿಸಿ.
96205 95579

# ಪರೋಪಕಾರಿ ಜೀವನ ಸಾಗಿಸಿ

## ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ



ಚಿತ್ರದುರ್ಗ, ಮೇ 11 - ಅನಂತ ಜಾತಿಯ ಮರಗಳು ಹಣ್ಣನ್ನು ಕೊಡುತ್ತಾ ಪರೋಪಕಾರ ಮಾಡುತ್ತಿವೆ. ಸಮಾಜಕ್ಕೆ ಹಸು, ಎಮ್ಮೆ, ನದಿಗಳು ಪರೋಪಕಾರಿಯಾಗಿರುವಂತೆ ಮನುಷ್ಯನು ಸಹ ಭೂಮಿ ಮೇಲೆ ಪರೋಪಕಾರಿಯಾಗಿ ನೆಮ್ಮದಿಯ ಜೀವನ ಸಾಗಿಸಬೇಕು ಎಂದು ಧಾರವಾಡ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಹೇಳಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ಮೊನ್ನೆ ನಡೆದ ಮುವತ್ತೂರನೇ ವರ್ಷದ ಐದನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸತಿ - ಪತಿಗಳೊಂದಾದ ಭಕ್ತಿ ಶಿವಂಗೆ ಹಿತವಾಗಿರುತ್ತದೆ. ದಾಂಪತ್ಯದಲ್ಲಿ ಬಿರುಕು ಬರಬಾರದು. ಅದುವೇ ಆದರ್ಶ ಬದುಕು ಎನಿಸಿಕೊಳ್ಳುವುದು ಎಂದು ಶ್ರೀಗಳು ಪ್ರತಿಪಾದಿಸಿದರು.

ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಲಿಂ. ಮಲ್ಲಿಕಾರ್ಜುನ ಶ್ರೀಗಳು 17 ನೇ ಜಗದ್ಗುರುಗಳಾಗಿ ಶ್ರೀಮಠವನ್ನು ಮುನ್ನಡೆಸಿದರು. ಮಠದ ಪಕ್ಕದ ತೆಂಗಿನ ತೋಟವನ್ನು ಅಭಿವೃದ್ಧಿ ಪಡಿಸಿದರು. ಶ್ರೀಗಳು ತುಂಬಾ ಸಾತ್ವಿಕರು ನಿಸ್ವಾರ್ಥಿಗಳು. ಶ್ರೀಮಠವು ಅನುಭವ ಮಂಟಪವನ್ನು ನಿರ್ಮಿಸಿ ಸರ್ವಸಮಾಜಗಳು ಸಾವಿರಾರು ಜನರಿಗೆ ಪ್ರತಿನಿತ್ಯ ಅನ್ನ ದಾಸೋಹವನ್ನು ಮಾಡುತ್ತಿದ್ದು, ಪ್ರತಿ ತಿಂಗಳು ಸಾಮೂಹಿಕ ಕಲ್ಯಾಣ ಮಹೋತ್ಸವವನ್ನು ಏರ್ಪಡಿಸಿ ಎಲ್ಲ ವರ್ಗದವರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ವಿವಾಹಗಳನ್ನು ನಡೆಸಿಕೊಂಡು ಬರುತ್ತಿರುವುದು ಸಾಮಾಜಿಕ ಕಳಕಳಿಯ ಧ್ಯೋತಕವಾಗಿದೆ ಎಂದು ನುಡಿದರು.

ಶ್ರೀ ಬಸವ ನಾಗಿದೇವ ಸ್ವಾಮಿಗಳು ಮಾತನಾಡಿ, ಇನ್ನೊಬ್ಬರಿಗೆ ಕೇಡನ್ನು ಬಯಸದ ದಾರಿಯಲ್ಲಿ ಸಾಗಬೇಕು. ಹಿಂದೆ ನಾವು ಒಳ್ಳೆಯದನ್ನು ಮಾಡಿದರೆ ಇಂದು ಅದರ ಫಲವನ್ನು ಉಣ್ಣುತ್ತೇವೆ. ನಾವು ಯಾವುದೇ ದುರ್ಬುದ್ಧಿಗೆ ಒಳಗಾಗಬಾರದು. ಅಂತಹ ಗುಣಗಳು ಬರಬಾರದು ಎಂದರು.

ಶ್ರೀ ಬಸವ ಬೀರೇಶ್ವರ ಸ್ವಾಮಿಗಳು, ಪೈಲ್ವಾನ್ ತಿಪ್ಪೇಸ್ವಾಮಿ ಮೊದಲಾದವರಿದ್ದರು.

ಇದಕ್ಕು ಮುನ್ನ ಶ್ರೀ ಜಯವಿಭವ ಮುರುಘ ರಾಜೇಂದ್ರ ಸ್ವಾಮೀಜಿಯವರ ಸ್ಮರಣೋತ್ಸವದ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜ್ಯರು ಪುಷ್ಪಾರ್ಚನೆ ಮಾಡಿದರು. ಕಾರ್ಯಕ್ರಮದಲ್ಲಿ 10 ಜೋಡಿಗಳ ವಿವಾಹ ನೆರವೇರಿತು. ಉಮೇಶ್ ಪತ್ತಾರ್ ಮತ್ತು ಸಂಗಡಿಗರು ಪ್ರಾರ್ಥಿಸಿದರು. ವೀರಭದ್ರಯ್ಯ ಸ್ವಾಗತಿಸಿದರು. ಚಿನ್ಮಯಿ ದೇವರು ನಿರೂಪಿಸಿದರು.

# ಅತಿಯಾದ ಮೊಬೈಲ್ ಬಳಕೆ ಕೂಡ ಆರೋಗ್ಯಕ್ಕೆ ಮಾರಕ

ದಾವಣಗೆರೆ, ಮೇ 11- ಅತಿಯಾದ ಮೊಬೈಲ್ ಬಳಕೆ ಕೂಡ ಆರೋಗ್ಯಕ್ಕೆ ಮಾರಕವಾಗಿದ್ದು, ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹಾಳು ಮಾಡುತ್ತದೆ ಎಂದು ಖ್ಯಾತ ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾನಸಿಕ ಕಾಯಿಲೆಗಳು ಬರಲು ನಿರ್ದಿಷ್ಟ ಕಾರಣಗಳಿರುವುದರಿಂದ ಅವುಗಳನ್ನು ಚಿಕಿತ್ಸೆಯಿಂದ ಗುಣಪಡಿಸಲು ಸಾಧ್ಯವಿದೆ. ನಮ್ಮ ಆಲೋಚನೆಗಳು, ಭಾವನೆಗಳು, ನಿರ್ಧಾರಗಳು ಎಲ್ಲವೂ ಪರಿಸ್ಥಿತಿಗೆ ಅಥವಾ ವಾಸ್ತವಿಕತೆಗೆ ತಕ್ಕಂತೆ ಇರುತ್ತದೆ. ಈ ಸ್ಥಿತಿಯಲ್ಲಿ ನಮಗೆ ಯಾವುದೇ ಅಹಿತ ಭಾವ, ನೋವು, ದುಃಖ, ಕೋಪ, ಭಯ ಇರುವುದಿಲ್ಲ. ಇಂತಹ ಮನಸ್ಥಿತಿಯನ್ನು ಮಾನಸಿಕ ಆರೋಗ್ಯ ಎನ್ನಬಹುದು ಎಂದರು.

ಮಾನಸಿಕ ಕಾಯಿಲೆ ವಂಶಪಾರಂಪರ್ಯವಾಗಿ ಬರುತ್ತದೆ ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆ. ಒತ್ತಡ, ಖಿನ್ನತೆ, ನಕಾರಾತ್ಮಕ ಚಿಂತನೆಗಳು ಮಾನಸಿಕ ಕಾಯಿಲೆಗೆ ಕಾರಣವಾಗಬಹುದು ಎಂದು ಹೇಳಿದರು.

ಮಾನಸಿಕ ಸಮಸ್ಯೆಗಳನ್ನು ಇತರರಲ್ಲಿ ಹಂಚಿಕೊಳ್ಳುವುದು, ಯೋಗ, ಧ್ಯಾನ, ಸಂಗೀತ ಆಲಿಸುವುದು, ಸಕಾರಾತ್ಮಕವಾಗಿ ಚಿಂತನೆಗಳ ಕಡೆಗೆ ಹೆಚ್ಚು ಒತ್ತು ನೀಡುವುದರಿಂದ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ಪ್ರಸ್ತುತ ಯೋಗ ಕೂಡ ಮಾರಾಟದ ಸರಕಾಗಿದೆ. ಮಾನಸಿಕ ಕಾಯಿಲೆ ಪೂರ್ವಾಗ್ರಹ ಪೀಡಿತ ನಂಬಿಕೆ ಜನರಲ್ಲಿದೆ. ಶೇ. 80 ರಷ್ಟು ಕಾಯಿಲೆಗಳಿಗೆ ಮನಸ್ಸು ಕಾರಣ ಎಂದರು.

ಬೇರೆಲ್ಲಾ ಕಾಯಿಲೆಗಳಿಗೆ ನಾವು ಹೇಗೆ ಕಾಳಜಿಯಿಂದ ಚಿಕಿತ್ಸೆ ಪಡೆಯುತ್ತೇವೆಯೋ ಅದೇ ರೀತಿ ಮಾನಸಿಕ ಕಾಯಿಲೆಗಳಿಗೂ ಚಿಕಿತ್ಸೆ ಪಡೆಯುವುದು ಅತ್ಯಗತ್ಯ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಹೆಚ್ಚು ಮಾನಸಿಕ ತೊಂದರೆಗೆ ಒಳಗಾಗುತ್ತಾಳೆ ಎಂದು ತಿಳಿಸಿದರು.

ಪ್ರತಿಯೊಬ್ಬರೂ ಸಹ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಅವಶ್ಯವಿದೆ. ಪತ್ರಕರ್ತರೂ ಸಹ ಸಾಮಾಜಿಕ ವೈದ್ಯರು ಎಂದು ಹೇಳಿದರು.

ಮಾನಸಿಕ ಆರೋಗ್ಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಪ್ರತಿ ಜಿಲ್ಲೆಯಲ್ಲಿನ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಮನೋವೈದ್ಯಕೀಯ ಕೇಂದ್ರಗಳನ್ನು ತೆರೆಯಲಾಗಿದ್ದು, ಮಾನಸಿಕ ರೋಗಿಗಳ ತಪಾಸಣೆ ಕೂಡ ನಡೆಯುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ಎ.ಎನ್. ಸುಂದರೇಶ್, ಪ್ರಭುದೇವ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ವೇಳೆ ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಅವರನ್ನು ಜಿಲ್ಲಾ ವರದಿಗಾರರ ಕೂಟದ ವತಿಯಿಂದ ಸನ್ಮಾನಿಸಲಾಯಿತು. ಅಧ್ಯಕ್ಷ ಕೆ.ಏಕಾಂತಪ್ಪ, ಖಜಾಂಚಿ ಮಧುನಾಗರಾಜ್, ರವಿಬಾಬು ಮತ್ತಿತರರಿದ್ದರು.

## ಮೌನೇಶ್ವರಿ ಕಿವುಡ, ಮೂಕರ ಮಕ್ಕಳ ಶಾಲೆಗೆ 100 ಫಲಿತಾಂಶ

ದಾವಣಗೆರೆ, ಮೇ 11- 2022-23 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿರುವ ಶ್ರೀ ಮೌನೇಶ್ವರಿ ಶ್ರವಣ ನ್ಯೂನತೆಯ ಮಕ್ಕಳ ವಸತಿಯುತ ಶಾಲೆಗೆ ಶೇ. 100 ಫಲಿತಾಂಶ ಬಂದಿದೆ. 47 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 35 ವಿದ್ಯಾರ್ಥಿಗಳು ಪ್ರಥಮ ದರ್ಜೆ, 12 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲಾ ಆಡಳಿತ ಮಂಡಳಿಯವರು ಮತ್ತು ಸಿಬ್ಬಂದಿ ವರ್ಗದವರು ಈ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ಭಾರತ್‌ಪೇ ಮಾಜಿ ವ್ಯವಸ್ಥಾಪಕ ನಿರ್ದೇಶಕನ ವಿರುದ್ಧ ಪ್ರಕರಣ

ನವದೆಹಲಿ, ಮೇ 11 – ಭಾರತ್‌ಪೇ ಮಾಜಿ ವ್ಯವಸ್ಥಾಪಕ ನಿರ್ದೇಶಕ ಅಶ್ನೀರ್ ಗೌರವ್ ವಿರುದ್ಧ ದೆಹಲಿ ಪೊಲೀಸರ ಆರ್ಥಿಕ ಅಪರಾಧ ದಳ ಅಕ್ರಮ ಹಣದ ಪ್ರಕರಣ ದಾಖಲಿಸಿದೆ. ಭಾರತ್‌ಪೇ ನೀಡಿರುವ ದೂರು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

## ನಾಳೆ ದಾವಿವಿಯಲ್ಲಿ ಮತ ಎಣಿಕೆ

(3ನೇ ಪುಟದಿಂದ) ಗೆಲುವಿನ ಬಗ್ಗೆ ಕುತೂಹಲ ಹೆಚ್ಚಾಗಿದೆ. ಯಾವ ಕ್ಷೇತ್ರದಲ್ಲಿ ಯಾರು ಗೆಲ್ಲಬಹುದು? ಎಂಬ ಲೆಕ್ಕಾಚಾರಗಳು ನಡೆಯುತ್ತಿವೆ. ಹಲವೆಡೆ ಬೆಟ್ಟಿಂಗ್ ಸಹ ನಡೆಯುತ್ತಿದೆ. ಹಲವು ದಿನಗಳಿಂದ ಬಿಡುವಿಲ್ಲದೆ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಅಭ್ಯರ್ಥಿಗಳು ಗುರುವಾರ ವಿಶ್ರಾಂತಿ ಪಡೆದಿದ್ದಾರೆ. ಯಾವ ಭಾಗದಲ್ಲಿ ಎಷ್ಟು ಮತಗಳು ಬಂದಿವೆ ಎಂಬ ಲೆಕ್ಕಾಚಾರದಲ್ಲೂ ತೊಡಗಿದ್ದಾರೆ. ಒಟ್ಟಿನಲ್ಲಿ ಶನಿವಾರ ಮಧ್ಯಾಹ್ನದ ವೇಳೆಗೆ ಅಭ್ಯರ್ಥಿಗಳ ಹಣೆಬರಹ ತಿಳಿಯಲಿದೆ.

## ಸುಪ್ರೀಂ ಆಕ್ಷೇಪ

(3ನೇ ಪುಟದಿಂದ) ಪಕ್ಷದಲ್ಲಿ ಭಿನ್ನಮತ ಉಂಟಾದಾಗ ಅದನ್ನು ಪಕ್ಷದ ಸಂವಿಧಾನ ಇಲ್ಲವೇ ಇತರೆ ಮಾರ್ಗದ ಮೂಲಕ ಬಗೆಹರಿಸಿಕೊಳ್ಳ ಬೇಕು. ಪಕ್ಷದ ಆಂತರಿಕ ಬಿಕ್ಕಟ್ಟು ಬಗೆಹರಿಸಲು ಸದನದಲ್ಲಿ ಬಲಾಬಲ ಪರೀಕ್ಷೆ ಸೂಕ್ತ ಮಾಧ್ಯಮ ವಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಶಿಂದೆ ಬಣದ ಸಚೇತಕರಾಗಿ ಭರತ್ ಗೊಗಾವಾಲೆ ಅವ ರನ್ನು ವಿಧಾನಸಭಾಧ್ಯಕ್ಷರು ನೇಮಿಸಿದ್ದು ಕಾನೂ ನಿಗೆ ವಿರುದ್ಧವಾಗಿದೆ ಎಂದೂ ನ್ಯಾಯಾಲಯ ತಿಳಿಸಿದೆ.

## ಪೈಲಟ್ ಪಾದಯಾತ್ರೆ

(3ನೇ ಪುಟದಿಂದ) ನಡೆಯಲಿದೆ.

ನನ್ನ ಧ್ವನಿ ಎತ್ತಲು ಹಾಗೂ ಜನರ ಧ್ವನಿಯಾಗಲು ಪಾದಯಾತ್ರೆ ನಡೆಸುತ್ತಿದ್ದೇನೆ ಎಂದು ಪೈಲಟ್ ಹೇಳಿದ್ದಾರೆ. 2020ರಲ್ಲಿ ಗೆಹ್ಲೋಟ್ ಸರ್ಕಾರದ ವಿರುದ್ಧ ಬಂಡಾಯಕ್ಕೆ ಮುಂದಾಗಿದ್ದ ಪೈಲಟ್‌ರನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಲಾಗಿತ್ತು.

ಮಾಜಿ ಸಚಿವ ರಾಜೇಂದ್ರ ಚೌಧರಿ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು ಪಾದಯಾತ್ರೆಯಲ್ಲಿ ಭಾಗಿಯಾಗಿದ್ದಾರೆ.

ಭ್ರಷ್ಟಾಚಾರವಷ್ಟೇ ಅಲ್ಲದೇ, ಸರ್ಕಾರಿ ನೇಮಕಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯವನ್ನೂ ಪ್ರಸ್ತಾಪಿಸಲಾಗಿದೆ.

ಭ್ರಷ್ಟಾಚಾರದ ಬಗ್ಗೆ ಕಳೆದ ಒಂದೂವರೆ ವರ್ಷದಿಂದ ಗೆಹ್ಲೋಟ್ ಅವರಿಗೆ ಪತ್ರ ಬರೆಯುತ್ತಿದ್ದೇನೆ. ಆದರೆ, ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಪೈಲಟ್ ಆರೋಪಿಸಿದ್ದಾರೆ.

## ಅಂಗನವಾಡಿ ಕೇಂದ್ರಗಳಿಗೆ ಕೂಡಲೇ ಹಾಲಿನ ಪುಡಿ ಪೂರೈಕೆಗೆ ಆಗ್ರಹ

ದಾವಣಗೆರೆ, ಮೇ 11- ಕಳೆದ ಮೂರ್ನಾಲ್ಕು ತಿಂಗಳಿಂದ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಸರ್ಕಾರದಿಂದ ಹಾಲಿನ ಪುಡಿ ಪೂರೈಕೆಯಾಗಿರುವುದಿಲ್ಲ. ಮಕ್ಕಳಲ್ಲಿನ ಅಪೌಷ್ಠಿಕತೆ ನಿವಾರಣೆಗೆ ಹಾಲಿನ ಸೇವನೆ ಅತ್ಯವಶ್ಯವಾಗಿದ್ದು, ಕೂಡಲೇ ಹಾಲಿನ ಪುಡಿ ಸರಬರಾಜು ಮಾಡುವಂತೆ ಎಐಡಿಎಸ್‌ಓ ಒತ್ತಾಯಿಸಿದೆ.

ಸರ್ಕಾರದ ಈ ಲೋಪದಿಂದಾಗಿ ರಾಜ್ಯದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ 36 ಲಕ್ಷಕ್ಕೂ ಹೆಚ್ಚು ಮಕ್ಕಳು ಹಾಗೂ 6 ಲಕ್ಷಕ್ಕೂ ಹೆಚ್ಚು ಗರ್ಭಿಣಿಯರು, ಬಾಣಂತಿಯರು ಹಾಲಿನಿಂದ ವಂಚಿತರಾಗಿದ್ದಾರೆ.

ಸರ್ಕಾರ ಈಗಾಗಲೇ ಅವಶ್ಯಕತೆಗಿಂತ 5 ಪಟ್ಟು ಕಡಿಮೆ ಹಾಲಿನ ಪುಡಿಯನ್ನು ಪೂರೈಕೆ ಮಾಡುತ್ತಿದೆ. ಮೂರರಿಂದ ಆರು ವರ್ಷದೊಳಗಿನ ಒಂದು ಮಗುವಿನ ಸಮರ್ಪಕ ಬೆಳವಣಿಗೆ ದಿನಕ್ಕೆ ಕನಿಷ್ಠ 450 ಮಿಲಿ ಲೀಟರ್ ಹಾಲಿನ ಅವಶ್ಯಕತೆ ಇದೆ. ಅಂದರೆ 70 ಗ್ರಾಂ ಹಾಲಿನ ಪುಡಿ ಬದಲಿಗೆ 15 ಗ್ರಾಂ ಮಾತ್ರ ನೀಡುತ್ತಿದೆ ಎಂದು ಸಂಘಟನೆ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

ಬಡತನ ಮತ್ತು ಆರ್ಥಿಕ ಬಿಕ್ಕಟ್ಟಿನಿಂದ ರಾಜ್ಯದಲ್ಲಿ ಅಪೌಷ್ಠಿಕತೆಯ ಪ್ರಮಾಣ ಹೆಚ್ಚಿದೆ. ನಮ್ಮ ದೇಶದಲ್ಲಿ ಪ್ರತಿದಿನ ಹಸಿವು ಮತ್ತು ಅಪೌಷ್ಠಿಕತೆಯಿಂದಾಗಿ 5000 ಕ್ಕೂ ಹೆಚ್ಚು ಮಕ್ಕಳು ಸಾವನ್ನಪ್ಪುತ್ತಿದ್ದಾರೆ. ಮಕ್ಕಳ ಪೌಷ್ಠಿಕಾಂಶಗಳ ಪೂರೈಕೆಗಾಗಿ ಲಕ್ಷಾಂತರ ಕುಟುಂಬಗಳು ಅಂಗನವಾಡಿ ಕೇಂದ್ರಗಳನ್ನು ಅವಲಂಬಿಸಿವೆ ಎಂದು ಹೇಳಿದ್ದಾರೆ.

ಕೂಡಲೇ ರಾಜ್ಯದ ಅಂಗನವಾಡಿಗಳಿಗೆ ಹಾಲಿನ ಪುಡಿಯನ್ನು ಪೂರೈಸುವಂತೆ ಆಗ್ರಹಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ದಾವಣಗೆರೆ, ಮೇ 11- ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದಕ್ಷಿಣ ವಲಯ ಘಟಕದ ವತಿಯಿಂದ ಸನ್ಮಾನಿಸಲಾಗುವುದು.

ಜಿಲ್ಲೆಯ ಮಕ್ಕಳಿಗೆ ಕನ್ನಡ ವಿಷಯದಲ್ಲಿ 125 ಕ್ಕೆ 125 ಅಂಕಗಳನ್ನು ಗಳಿಸಿದವರು ಹಾಗೂ ಶಾಲೆಯಲ್ಲಿ ಅತಿ ಹೆಚ್ಚು ಅಂದರೆ 600 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಇದೇ ದಿನಾಂಕ 17ರೊಳಗೆ ಹೆಸರು ನೋಂದಾಯಿಸಿಕೊಳ್ಳ ಬಹುದು ಎಂದು ರವಿಕುಮಾರ್ ಎ.ಜೆ. (88989 88989), ಹರೀಶ್ ಎಂ.ಆರ್. (97315 12672)ತಿಳಿಸಿದ್ದಾರೆ.

## ಸಂಜನಾಗೆ 600



ದಾವಣಗೆರೆ, ಮೇ 11 - ನಗರದ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಸಂಜನಾ.ಜಿ. 625 ಅಂಕಗಳಿಗೆ 600 (96%) ಅಂಕ ಗಳಿಸಿದ್ದಾರೆ. ಕನ್ನಡದಲ್ಲಿ 125 ಅಂಕಗಳಿಗೆ 125 ಅಂಕ ಗಳಿಸಿದ್ದಾರೆ. ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಎಸ್.ಕೆ. ಬಸವರಾಜ್ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

## ಜಿ. ಎಂ. ಹಾಲಮ್ಮ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಶೇ. 100ರಷ್ಟು ಫಲಿತಾಂಶ



ದಾವಣಗೆರೆ, ಮೇ 11- ನಗರದ ಜಿ.ಎಂ. ಹಾಲಮ್ಮ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು 2023ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಒಟ್ಟು 48 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 48 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶೇ. 100ರಷ್ಟು ಫಲಿತಾಂಶ ದಾಖಲಿಸಿದ್ದಾರೆ. 13 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 33 ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದಿರುತ್ತಾರೆ. ಅನನ್ಯ ಎಂ.ಸಿ, ಪ್ರಥಮ (95.04%), ಜೀವನ್ ಸಾಯಿ, ದ್ವಿತೀಯ (94.34%), ಪ್ರಿಯಾಂಕ ಬಿ.ವಿ ಮತ್ತು ಆಶಿತ ಬಿ.ಯು, ತೃತೀಯ (94.24%) ಸ್ಥಾನವನ್ನು ಪಡೆದಿದ್ದಾರೆ.


## ಎಲೆಬೇತೂರಿನ ಶ್ರೀ ತರಳಬಾಳು ಪ್ರೌಢಶಾಲೆಗೆ ಶೇ. 100 ಫಲಿತಾಂಶ



ದಾವಣಗೆರೆ, ಮೇ 11 - ಎಲೆಬೇತೂರಿನ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ 2022-23ನೇ ಸಾಲಿನಲ್ಲಿ ಶೇ. 100 ರಷ್ಟು ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಂದಿದೆ.

ಶೈಕ್ಷಣಿಕ ವರ್ಷದಲ್ಲಿ 12 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 5 ವಿದ್ಯಾರ್ಥಿಗಳು ಉನ್ನತ ದರ್ಜೆ ಮತ್ತು 7 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಾವ್ಯ ವಿ.ಎಸ್. (588), ಲೋಹಿತ್ ರಾಜ್ ಆರ್. (570), ಸುನಂದ ಬಿ.ಜಿ. (552), ಲತಿಕಾ ಬಿ.ಜಿ. (532) ಮತ್ತು ಸಂಜನಾ ಆರ್. (532) ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿದ್ದಾರೆ.

## ವಾಯುವಿಹಾರಿಗಳ ಕೈಗೆ ಸಿಕ್ಕ ಮಾನವ ರೂಪದ ಹುಳು



ದಾವಣಗೆರೆ, ಮೇ 11- ವಿದ್ಯಾನಗರ ಉದ್ಯಾನವನದಲ್ಲಿ ವಾಯು ವಿಹಾರ ಮಾಡುತ್ತಿದ್ದ ಪ್ರೀಮಿಯರ್ ಕಮ್ಯೂನಿಕೇಷನ್ಸ್ ಮಾಲೀಕ ದಿವಾಕರ್ ಮಕ್ಕಳಿಗೆ ಮ್ಯಾನ್ ಫೇಸ್ಡ್ ಬಗ್ ಹೆಸರಿನ ಮಾನವನ ಮುಖ ಹೋಲುವ ವಿಚಿತ್ರ ಹುಳು ಸಿಕ್ಕಿದೆ. ಚಿ. ಗಗನ್, ಕು. ಫಾಲ್ಗುಣಿ ಅವರುಗಳು ಈ ಹುಳವನ್ನು ಮನೆಗೆ ಹೊಯ್ದು ಸಲಹುತ್ತಿದ್ದಾರೆ.

## ಅಗ್ನಿವೀರರಿಗೆ ಮೀಸಲಾತಿ

(3ನೇ ಪುಟದಿಂದ) ಮೀಸಲಾತಿ ಕಲ್ಪಿಸಲಾಗುವುದು. ಮೊದಲ ತಂಡದ ಅಗ್ನಿವೀರರಿಗೆ ಐದು ವರ್ಷಗಳ ವಯೋಮಾನ ವಿನಾಯಿತಿ ನೀಡಲಾಗುವುದು. ನಂತರದ ತಂಡಗಳವರಿಗೆ 3 ವರ್ಷಗಳ ವಯೋಮಾನ ವಿನಾಯಿತಿ ನೀಡಲಾಗುವುದು.

# ಬಯಕೆ ಒಳ್ಳೆಯದಾದರೆ ಬದುಕು ಉಜ್ವಲ

### ಶ್ರೀ ರಂಭಾಪುರಿ ಜಗದ್ಗುರುಗಳು



ಬಾಳೆಹೊನ್ನೂರು, ಮೇ 11 - ಸ್ವಾರ್ಥ ರಹಿತ ಬದುಕಿಗೆ ಬೆಲೆ ನೆಲೆಯಿದೆ. ಅಷ್ಟೇ ಅದ್ಭುತ ಶಕ್ತಿಯಿದೆ. ಮನುಷ್ಯನ ಬಯಕೆಗಳು ಒಳ್ಳೆಯದು ಇದ್ದರೆ ಬದುಕು ಉಜ್ವಲಗೊಳ್ಳುತ್ತದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶ್ರೀ ರಂಭಾಪುರಿ ಪೀಠದಲ್ಲಿ ಹುಣ್ಣಿಮೆ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನ ಕೈ ಸ್ವಚ್ಛವಿದ್ದರೆ ವ್ಯವಹಾರಕ್ಕೆ ತೊಂದರೆಯಿಲ್ಲ. ನಾಲಿಗೆ ಶುದ್ಧವಿದ್ದರೆ ಸ್ನೇಹ ಸಂಬಂಧಗಳಿಗೆ ತೊಂದರೆಯಿಲ್ಲ. ಮನಸ್ಸು ಸ್ವಚ್ಛವಿದ್ದರೆ ಪ್ರೀತಿ ವಾತ್ಸಲ್ಯಕ್ಕೆ ತೊಂದರೆಯಿಲ್ಲ. ಈ ಮೂರು ಸ್ವಚ್ಛವಿದ್ದರೆ ಜೀವನದಲ್ಲಿ ಯಾವುದಕ್ಕೂ ತೊಂದರೆಯಿಲ್ಲ. ಒಂದು ನಿಮಿಷದಲ್ಲಿ ಬದುಕು ಬದಲಾವಣೆ ಆಗುವುದಿಲ್ಲ. ಆದರೆ ಒಂದು ನಿಮಿಷದಲ್ಲಿ ತೆಗೆದುಕೊಂಡ ನಿರ್ಧಾರ ನಮ್ಮ ಬದುಕನ್ನು ಬದಲಾಯಿಸುತ್ತದೆ. ಮನುಷ್ಯನ ಬಯಕೆಗಳು ರಚನಾತ್ಮಕವಾಗಿರಬೇಕೇ ವಿನಃ ವಿನಾಶಕಾರಿಯಾ ಗಿರಬಾರದೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಸ್ಪಷ್ಟವಾಗಿ ಬೋಧಿಸಿದ್ದಾರೆ.

ವೀರಶೈವ ಧರ್ಮ ಮನುಷ್ಯ ಜೀವನದ ವಿಕಾಸಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಅರಿವು ಆದರ್ಶ ಮತ್ತು ಆಚರಣೆಗಳಿಂದ ಮನುಷ್ಯ ಜೀವನ ಉಜ್ವಲಗೊಳ್ಳುತ್ತದೆ ಎಂದರು.

ಬೇರುಗಂಡಿ ಬೃಹನ್ಮಠದ ಶ್ರೀ ರೇಣುಕ ಮಹಾಂತ ಶಿವಾಚಾರ್ಯ ಸ್ವಾಮಿಗಳು ಸುಮಾರು 15 ಜನ ವೀರಮಾಹೇಶ್ವರ ವಟುಗಳಿಗೆ ಶಿವದೀಕ್ಷೆಯಿತ್ತು ಪಂಚಾಕ್ಷರ ಮಂತ್ರವನ್ನು ಬೋಧಿಸಿದರು. ತರೀಕೆರೆ ಹಿರೇಮಠದ ಶ್ರೀ ಜಗದೀಶ್ವರ ಶಿವಾಚಾರ್ಯರು, ಓಂಕಾರ ಬೆನ್ನೂರಿನ ಶ್ರೀ ಸಿದ್ಧರೇಣುಕ ಶಿವಾಚಾರ್ಯರು, ಸೇಡಂ ವಿರಕ್ತಮಠದ ಪಂಚಾಕ್ಷರ ಶ್ರೀಗಳು, ಮಳಖೇಡದ ಶ್ರೀ ಕೊಟ್ಟೂರೇಶ್ವರ ಶಿವಾಚಾರ್ಯರು, ಚಿಪ್ಪಲಕಟ್ಟಿ ಶ್ರೀ ಕಲ್ಲಯ್ಯಸ್ವಾಮಿ ಉಪಸ್ಥಿತರಿದ್ದು ನುಡಿ ನಮನ ಸಲ್ಲಿಸಿದರು.

## ಅನಾಥ, ಕಡು ಬಡವ ಹೆಣ್ಣು ಮಕ್ಕಳಿಗೆ 'ರಶ್ಮಿ' ವಸತಿ ಶಾಲಾ ಪ್ರವೇಶಕ್ಕೆ ಸಂದರ್ಶನ

ದಾವಣಗೆರೆ,ಮೇ 11- ನಗರದ ಡಾ.ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್ ವತಿಯಿಂದ ನಡೆಸುತ್ತಿರುವ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆ (ಜಿಐಎಂಟಿ ಕಾಲೇಜ್ ಎದುರು) ಯಲ್ಲಿ 1ರಿಂದ 9ನೇ ತರಗತಿ ಓದ ಬಯಸುವ ಹೆಣ್ಣುಮಕ್ಕಳಿಗೆ ಇದೇ ಮೇ 14ರ ಭಾನುವಾರ ಬೆಳಿಗ್ಗೆ ಸಂದರ್ಶನ ಏರ್ಪಡಿಸಲಾಗಿದೆ. ಅನಾಥ, ಕಡು ಬಡವ ಹೆಣ್ಣು ಮಕ್ಕಳು ಮಾತ್ರ ತಮ್ಮ ಪಾಲಕರೊಂದಿಗೆ ಸಂದರ್ಶನಕ್ಕೆ ಹಾಗರಾಗಬಹುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9916362288.

## ಈ ಬಾರಿ ಕಾಂಗ್ರೆಸ್ ಬಹುಮತದೊಂದಿಗೆ ಸರ್ಕಾರ ರಚಿಸುವುದು ಖಚಿತ: ಆನಂದಪ್ಪ

ದಾವಣಗೆರೆ, ಮೇ 11- ಈ ಬಾರಿ ಕಾಂಗ್ರೆಸ್ ಪಕ್ಷ ಸಂಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುವುದು ಖಚಿತ ಎಂದು ಪಕ್ಷದ ಮುಖಂಡ ಎಸ್.ಎಲ್.ಆನಂದಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಜನವಿರೋಧಿ ಆಡಳಿತದ ವಿರುದ್ಧ ಬೇಸತ್ತಿದ್ದ ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು.

ದಾವಣಗೆರೆ ಜಿಲ್ಲೆಯ ಎಲ್ಲಾ 7 ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಲಿದೆ ಎಂದ ಅವರು, ವಿಶೇಷವಾಗಿ ದಾವಣಗೆರೆ ಜಿಲ್ಲೆಯಲ್ಲಿ ಡಾ.ಶಾಮನೂರು ಶಿವಶಂಕರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್ ಅವರ ಕೈ ಬಲಪಡಿಸಲು ಹಿಂದುಳಿದ ವರ್ಗ, ದಲಿತರು, ತಳ ಸಮುದಾಯದವರು ಒಂದಾಗಿದ್ದಾರೆ ಎಂದು ಹೇಳಿದರು.

ಪಕ್ಷದ ಮುಖಂಡರಾದ ಜೆ.ಎನ್.ನಿಂಗಪ್ಪ, ಅಡಾಣಿ ಸಿದ್ದಪ್ಪ, ಕಾಳಾಚಾರಿ, ಹೆಚ್.ವೈ.ಶಶಿಧರ್, ಕರೂರು ಗಣೇಶಪ್ಪ, ರಾಮಚಂದ್ರಪ್ಪ ಅಕ್ಕಿ, ಸುರೇಶ್ ಎಂ.ಕೊಗುಂಡೆ, ಜಾಕಿರ್ ಸಾಬ್ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

### ಓದುಗರ ಪತ್ರ

## ಮತದಾನ, ಮತಬೇಟೆ ಶಬ್ಧಗಳ ಉಪಯೋಗ ಸರಿಯೇ ?

ಮಾನ್ಯರೇ,

ಇಂಗ್ಲಿಷ್‌ನಲ್ಲಿ 'Vote' ಎನ್ನುವ ಪದಕ್ಕೆ ಕನ್ನಡದಲ್ಲಿ ಮತದಾನ ಎಂದು ಹೇಳುವ ಪರಿಪಾಠ ಬಂದಿದೆ. ಮತದಾನ ಎಂದರೆ, ದಾನವನ್ನು ನೀಡಬಹುದು ಅಥವ ಬಿಡಬಹುದು. ಆದರೆ ಮತ ಚಲಾಯಿಸಬೇಕಾದದ್ದು ನಮ್ಮೆಲ್ಲರ ಹಕ್ಕು ಮತ್ತು ಕರ್ತವ್ಯ. ಹಕ್ಕುಗಳನ್ನು ಕೇಳುವ ನಾವು ಕರ್ತವ್ಯಗಳನ್ನು ತಪ್ಪಬಾರದಲ್ಲವೇ? ಏಕೆಂದರೆ ಐದು ವರ್ಷಗಳ ಕಾಲ ಆಡಳಿತ ಮಾಡುವವರನ್ನು ಆರಿಸುವ ಗುರುತರ ಜವಬ್ದಾರಿ ನಮ್ಮೆಲ್ಲರದಾಗಿರುವಾಗ ಮತ ದಾನವೆಂದು ಸುಮ್ಮನೆ ಮನೆಯಲ್ಲಿ ಕುಳಿತರೆ ಪ್ರಜಾಪ್ರಭುತ್ವಕ್ಕೆ ಇದು ದೊಡ್ಡ ಧಕ್ಕೆ.

ಆಸ್ಟ್ರೇಲಿಯಾ, ಸಿಂಗಾಪುರ, ಸ್ವಿಡ್ಜರ್ ಲ್ಯಾಂಡ್ ದೇಶಗಳಲ್ಲಿ ಮತದಾರರು ಮತವನ್ನು ಚಲಾಯಿಸದಿದ್ದಲ್ಲಿ, ಮತವನ್ನು ಏತಕ್ಕಾಗಿ ಚಲಾಯಿಸಲಿಲ್ಲವೆಂದು ಕೋರ್ಟ್‌ಗೆ ಹೋಗಿ ವಿವರಿಸಬೇಕಾದ ಕಾಯಿದೆ ಇದೆ. ಸರಿಯಾದ ಕಾರಣವಿಲ್ಲದೆ ಮತ ಚಲಾಯಿಸದಿದ್ದರೆ, ನಾಗರೀಕತ್ವವನ್ನುವನ್ನು ಅನರ್ಹಗೊಳಿಸುವ ಅಧಿಕಾರ ಆ ದೇಶದ ಸಂವಿಧಾನಕ್ಕಿದೆ. ಅಂತಹ ಕಾಯಿದೆ ನಮ್ಮಲ್ಲಿಯೂ ಬರಬೇಕಿದೆ.

ಮೀಡಿಯಾದವರು ರಾಜಕಾರಣಿಗಳು ಮತಬೇಟೆಗೆ ಬರುತ್ತಾರೆ ಎಂದು ಹೇಳುತ್ತಾರೆ. ಬೇಟೆ ಎನ್ನುವ ಪದ ಸಮಂಜಸವಲ್ಲ. ಆಗ ರಾಜಕಾರಣಿಗಳು ಬೇಟೆಗಾರರು, ಪ್ರಜಾಪ್ರಭುತ್ವದಲ್ಲಿ ಪ್ರಭುಗಳಾದ ನಾವು ಪ್ರಾಣಿಗಳೆಂದಾಗುತ್ತದೆ. ಇದು ಸರಿಯೇ?

ಪ್ರಸ್ತುತ ಚುನಾವಣೆಯಲ್ಲಿ ಚುನಾವಣೆಗೆ ಅಭ್ಯರ್ಥಿಗಳು 10 ಕೋಟಿ, 20 ಕೋಟಿ, 30 ಕೋಟಿ ಖರ್ಚು ಮಾಡಿದ್ದಾರೆ ಎಂಬ ವದಂತಿಗಳು ಬಂದಿವೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ. ಆಮಿಷಗಳನ್ನು ಒಡ್ಡುವುದು ಶಿಕ್ಷಾರ್ಹ ಅಪರಾಧ. ಪ್ರಜಾಪ್ರಭುತ್ವ ಮತ್ತು ಸಂವಿಧಾನದಂತೆ ನಡೆದುಕೊಳ್ಳುವುದು ನಾವೇ ಸೃಷ್ಟಿಸಿಕೊಂಡ ಒಂದು ಅತ್ಯುತ್ತಮ ವ್ಯವಸ್ಥೆ. ಅದನ್ನು ಉಳಿಸಿ, ಬೆಳೆಸೋಣ.

-ಶಿವನಕೆರೆ ಬಸವಲಿಂಗಪ್ಪ
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.

## ಜಿಲ್ಲಾ ಟಾಪರ್ ಚೇತನಾಗೆ ಕ್ಷೇತ್ರ ಶಿಕ್ಷಣಾಧಿಕಾರಿ ದಾರುಕೇಶ್ ಅಭಿನಂದನೆ



ದಾವಣಗೆರೆ, ಮೇ 11- 625 ಕ್ಕೆ 624 ಅಂಕ ಗಳಿಸಿದ ದಾವಣಗೆರೆ ನಗರದ ಶ್ರೀ ಸಿದ್ಧಗಂಗಾ ಕಾಂಪೋಜಿಟ್ ಹೈಸ್ಕೂಲ್ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಆರ್. ಚೇತನಾಗೆ ದಾವಣಗೆರೆ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ದಾರುಕೇಶ್ ಅವರು ಶಾಲು ಹೊದಿಸಿ, ಪೇಟ ತೊಡಿಸಿ ಹಾರ ಹಾಕಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಬಾಲಕಿಯ ತಂದೆ ನಿವೃತ್ತ ಯೋಧ ರಘುನಾಥ ಜಗತಾಪ್ ಮತ್ತು ತಾಯಿ ರೇಣುಕಾ ಬಾಯಿ, ಶಿಕ್ಷಣ ಸಂಯೋಜಕರಾಗಿದ್ದ ಮುರುಗೇಂದ್ರಯ್ಯ ಹಾಜರಿದ್ದರು. ಬಾಲಕಿಯ ಸಾಧನೆಯನ್ನು ಶ್ಲ್ಯಾಘಿಸಿದ ಶಿಕ್ಷಣಾಧಿಕಾರಿಗಳು, ಮುಂದಿನ ಗುರಿ ಐ.ಎ.ಎಸ್. ಮಾಡಬೇಕೆಂಬುದಾಗಿ ಬಾಲಕಿ ಹೇಳಿದಾಗ ಮತ್ತಷ್ಟು ಸಂಭ್ರಮಿಸಿದರು. ಜಿಲ್ಲೆಗೆ ಕೀರ್ತಿ ಬರುವಂತೆ ಮಾಡಿದ ಸಿದ್ಧಗಂಗಾ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಬೋಧಕ ವರ್ಗದವರ ಶ್ರದ್ಧೆ ಮತ್ತು ಬದ್ಧತೆಯನ್ನು ಹೊಗಳಿದರು.

## ಜಮೀನಿಗೆ ಮಾತ್ರ ಕೇಂದ್ರ ಸೀಮಿತ

(3ನೇ ಪುಟದಿಂದ) ಆಡಳಿತಾತ್ಮಕ ನಿಯಂತ್ರಣ ಕೇಂದ್ರ ಸರ್ಕಾರದ ಬಳಿ ಇರಬೇಕಾದರೆ ದೆಹಲಿಯಲ್ಲಿ ಚುನಾಯಿತ ಸರ್ಕಾರ ಇರುವುದರ ಉದ್ದೇಶವೇನು? ಎಂದು ಪ್ರಶ್ನಿಸಿತು. ಜನರ ಇಚ್ಛೆಯನ್ನು ಪ್ರತಿನಿಧಿಸಲು ದೆಹಲಿ ವಿಧಾನಸಭೆಗೆ ಶಾಸನ ಮಾಡಲು ಅಧಿಕಾರವನ್ನು ನೀಡಲಾಗಿದೆ. ಪ್ರಜಾಪ್ರಭುತ್ವದ ತತ್ವ ಮತ್ತು ಒಕ್ಕೂಟ ವ್ಯವಸ್ಥೆ ಮೂಲಭೂತ ರಚನೆಯ ಒಂದು ಭಾಗವಾಗಿದೆ. ಅದನ್ನು ಉಲ್ಲಂಘಿಸುವುದು ಸರಿಯಲ್ಲ ಎಂದು ನ್ಯಾಯಾಲಯ ಹೇಳಿದೆ.

## ಅತಂತ್ರ ಸಮೀಕ್ಷೆ, ಮೈತ್ರಿಯ ಕನವರಿಕೆ


(3ನೇ ಪುಟದಿಂದ) ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯಕ್ಕೆ ದಿಡೀರನೇ ಆಗಮಿಸಿ ಇಲ್ಲಿನ ಮುಖಂಡರೊಟ್ಟಿಗೆ ನಿರಂತರ ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದಾರೆ. ನಗರಕ್ಕೆ ಬರುತ್ತಿದ್ದಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮನೆಗೆ ತೆರಳಿದ ಸುರ್ಜೇವಾಲ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ಮುಖಾಮುಖಿ ಚರ್ಚೆ ನಡೆಸಿದರು.

ಆನಂತರ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಅವರನ್ನು ಕರೆಸಿಕೊಂಡು ಸಮಾಲೋಚನೆ ಮಾಡಿದರು. ಇದಕ್ಕೂ ಮುನ್ನ ಶಿವಕುಮಾರ್ ತಮ್ಮ ತೋಟದ ಮನೆಯಲ್ಲೇ ಕುಳಿದು, ಅಧಿಕಾರ ಹಿಡಿಯಲು ರಾಜಕೀಯ ಲೆಕ್ಕಾಚಾರ, ತಮ್ಮ ಸಹೋದರ ಸುರೇಶ್ ಜೊತೆಗೂಡಿ, ಕೆಲವರನ್ನು ಸಂಪರ್ಕಿಸಿ, ಸಮಾಲೋಚನೆ ಮಾಡಿದರು.

ಅಷ್ಟೇ ಅಲ್ಲ ಪಕ್ಷೇತರರಾಗಿ ವಿಧಾನಸಭೆಯ ಆರು ಮಂದಿ ಆಯ್ಕೆಗೊಳ್ಳಬಹುದೆಂಬ ವರದಿಯ ಹಿನ್ನೆಲೆಯಲ್ಲಿ ಅವರನ್ನೂ ಸಂಪರ್ಕಿಸಿ ಬೆಂಬಲ ಕೋರಿದ್ದಾರೆ ಎನ್ನಲಾಗುತ್ತಿದೆ.


## ಜನ್ಮ ದಿನದ ಶುಭಾಶಯಗಳು





ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಹರಿಹರದ ಮಾಜಿ ಶಾಸಕರು ಆಗಿರುವ
ಶ್ರೀ ಬಿ.ಪಿ. ಹರೀಶಣ್ಣ ಅವರಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಭಗವಂತ ಅವರಿಗೆ ಆಯುರಾರೋಗ್ಯ, ಐಶ್ವರ್ಯ ನೀಡಿ ಇನ್ನಷ್ಟು ಜನಸೇವೆ ಮಾಡಲು ಅವಕಾಶ ನೀಡಲಿ ಎಂದು ಪ್ರಾರ್ಥಿಸುವ.



ಸಚಿನ್
ಕಾಫಿಕಟ್ಟೆ, ವಿದ್ಯಾನಗರ,
ದಾವಣಗೆರೆ.


## ಮಾನ್ಯ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಹೊನ್ನಾಳಿ

**P & S C No. 3/2023**

ಅರ್ಜಿದಾರರು : 1) ಶ್ರೀಮತಿ ಕವಿತ ಕೋಂ ನಾಗರಾಜ್ ವಯಸ್ಸು 40 ವರ್ಷ 2) ಹರ್ಷ ಬಿನ್ ನಾಗರಾಜ್ ವಯಸ್ಸು 19 ವರ್ಷ 3) ಹೇಮಂತ್ ಬಿನ್ ನಾಗರಾಜ್ ವಯಸ್ಸು 17 ವರ್ಷ (ಮೈನರ್ ಗಾರ್ಡಿಯನ್ 1ನೇ ಅರ್ಜಿದಾರರದ ಶ್ರೀಮತಿ ಕವಿತ)
4) ಶ್ರೀಮತಿ ಶಂಕರಮ್ಮ ಕೋಂ ಬೀರಪ್ಪ ವಯಸ್ಸು 78 ವರ್ಷ, ನೆಲಹೊನ್ನೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ - ವಿರುದ್ಧ /- ಎದುರುದಾರರು - ಯಾರೂ ಇಲ್ಲ

**ಸಿಪಿಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ನೀಡಲಾದ ಪತ್ರಿಕಾ ಪ್ರಕಟಣಾ ನೋಟೀಸ್**

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರು ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು ನೆಲಹೊನ್ನೆ ಗ್ರಾಮದ ಶ್ರೀ ದಿ. ಬೀರಪ್ಪನ ಮಗನಾದ ನಾಗರಾಜನು ಔಷಧಿ ಕಂಪನಿಯಲ್ಲಿ ಕೆಲಸ ಮಾಡುವಾಗ ಅಕಾಲಿಕ ಮರಣ ಹೊಂದಿರುತ್ತಾನೆ, ಸದರಿ ಕಂಪನಿಯಿಂದ ಅವರ ವಾರಸುದಾರರಾದ ಅರ್ಜಿದಾರರಿಗೆಲ್ಲರಿಗೂ ಪರಿಹಾರ ಬರುತ್ತದೆ. ಅದಕ್ಕೆ ಸದರಿ ಕಂಪನಿಯವರು ಸದರಿ ಹಣವನ್ನು ಕೊಡಲು ಸಕ್ಸೇಷನ್ ಸರ್ಟಿಫಿಕೇಟನ್ನು ಕೇಳಿರುತ್ತಾರೆ. ಅದಕ್ಕೆ ಅರ್ಜಿದಾರರು ಸಕ್ಸೇಷನ್ ಸರ್ಟಿಫಿಕೇಟನ್ನು ಕೋರಿ ಘನ ನ್ಯಾಯಾಲಯದಲ್ಲಿ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿದ್ದು, ಇರುತ್ತಾರೆ. ಸದರಿ ಅರ್ಜಿಗಾಗಲಿ ಅಥವಾ ಅರ್ಜಿದಾರರು ಮೇಲ್ಕಂಡ ಔಷಧಿ ಕಂಪನಿಯಿಂದ ಪಡೆಯಬಹುದಾದ ಹಣಕ್ಕೆ ಯಾರದಾದರೂ ಆಕ್ಷೇಪಣೆಯಿದ್ದಲ್ಲಿ ಅವರುಗಳು ಮೇಲ್ಕಂಡ ದಾವೆಯು ದಿನಾಂಕ : 14.06.2023 ರಂದು ಮುದ್ದತ್ತು ಇರುತ್ತದೆ. ಅಂದು ಬೆಳಿಗ್ಗೆ 11.00 ಘಂಟೆಗೆ ಮೇಲ್ಕಂಡ ಘನ ನ್ಯಾಯಾಲಯಕ್ಕೆ ಹಾಜರಾಗಿ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಆಕ್ಷೇಪಣೆ/ತಕರಾರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇಲ್ಲದಿದ್ದರೆ ಯಾರದೂ ಯಾವುದೇ ತರನಾದ ಆಕ್ಷೇಪಣೆ/ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿದಾರರುಗಳು ಕೋರಿದ ಪರಿಹಾರದಂತೆ ಆದೇಶ ಮಾಡಲಾಗುವುದು.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ : 09.05.2023 ರಂದು ನೀಡಲಾಗಿದೆ. ನ್ಯಾಯಾಲಯದ ಆದೇಶದ ಮೇರೆಗೆ.

ಸಹಿ/- ಅಪೀಲುದಾರರ ಪರ ವಕೀಲರು
ಕೆ.ಜಿ. ವಸಂತ್, ವಕೀಲರು, DVG. 9844072441

ಸಹಿ/- ಶಿರಸ್ತೇದಾರರು
ಮಾನ್ಯ ಹಿರಿಯ ಸಿವಿಲ್ & ಜೆಎಂಎಫ್‌ಸಿ
ನ್ಯಾಯಾಧೀಶರವರ ನ್ಯಾಯಾಲಯ, ಹೊನ್ನಾಳಿ.

# ಇಮ್ರಾನ್ ಖಾನ್ ಬಿಡುಗಡೆಗೆ ಪಾಕ್ ಸುಪ್ರೀಂ ಕೋರ್ಟ್ ಆದೇಶ



ಇಸ್ಲಾಮಾಬಾದ್, ಮೇ 11 – ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಬಂಧನ ಅಕ್ರಮ ಎಂದು ಹೇಳಿರುವ ಅಲ್ಲಿನ ಸುಪ್ರೀಂ ಕೋರ್ಟ್, ತಕ್ಷಣವೇ ಬಿಡುಗಡೆ ಮಾಡುವಂತೆ ಆದೇಶಿಸಿದೆ.

ಅಲ್ ಕದೀರ್ ಟ್ರಸ್ಟ್‌ನ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಇಮ್ರಾನ್ ಖಾನ್ ಅವರನ್ನು ಇಸ್ಲಾಮಾಬಾದ್ ಹೈಕೋರ್ಟ್ ಆವರಣದಲ್ಲಿ ಬಂಧಿಸಲಾಗಿತ್ತು. ನಂತರ ಅವರನ್ನು 8 ದಿನಗಳ ಕಾಲ ಕಸ್ಟಡಿಗೆ ವಹಿಸಲಾಗಿತ್ತು. ಇಮ್ರಾನ್ ಖಾನ್ ಬಂಧನದ ವಿರುದ್ಧ ಪಾಕಿಸ್ತಾನದಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಹಲವೆಡೆ ಸೈನ್ಯವನ್ನು ನಿಯೋಜಿಸಲಾಗಿತ್ತು. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಉಮ್ರ ಅಟಾ ಬಂಡಿಯಾಲ್ ಅವರ ನೇತೃತ್ವದ ಪೀಠ ಇಮ್ರಾನ್ ಖಾನ್ ಬಂಧನದ ಬಗ್ಗೆ ವಿಚಾರಣೆ ನಡೆಸಿತ್ತು. ಬಂಧನ ಅಕ್ರಮವಾಗಿರುವ ಕಾರಣ ತಕ್ಷಣವೇ ಬಿಡುಗಡೆ ಮಾಡಬೇಕೆಂದು ಆದೇಶಿಸಲಾಗಿದೆ.


## ಜನ್ಮದಿನದ ಶುಭಾಶಯಗಳು

ತಮ್ಮ ಸಾರ್ಥಕ ಜೀವನದ 62 ವಸಂತಗಳನ್ನು
ಯಶಸ್ವಿಯಾಗಿ ಪೂರೈಸಿ ಇಂದು 63ನೇ
ವರ್ಷಕ್ಕೆ ಕಾಲಿಡುತ್ತಿರುವ
ಹರಿಹರ ಕ್ಷೇತ್ರದ ಮಾಜಿ ಶಾಸಕರಾದ
ಶ್ರೀ ಬಿ.ಪಿ. ಹರೀಶ್ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು

ಬೆಣ್ಣೆಹಳ್ಳಿ ಸಿದ್ದೇಶ್
ಸದಸ್ಯರು, 3ನೇ ವಾರ್ಡ್, ಪುರಸಭೆ, ಮಲೇಬೆನ್ನೂರು.


## ವಿವಾಹ : ನೂತನ ದಂಪತಿಯಿಂದ ಮತದಾನ



ದಾವಣಗೆರೆ ವಾಸಿ, ಶ್ರೀಮತಿ ಮಾಲ ಮತ್ತು ಶ್ರೀ ಎನ್. ವಿಠ್ಠಲ್ ಇವರ ಸುಪುತ್ರಿ **ಶ್ರೀಮತಿ ಸಿಂಚನ** ಮತ್ತು **ಶ್ರೀ ದರ್ಶನ್** ದಂಪತಿ ದಿನಾಂಕ 10-5-2023ರ ಬುಧವಾರ ಚುನವಣೆಯ ಮತದಾನ ದಿನದಂದು ತಮ್ಮ ವಿವಾಹ ಕಾರ್ಯದ ನಂತರ, ಹಸೆಮಣೆಯಿಂದ ನೇರವಾಗಿ ತಮಗೆ ಸಂಬಂಧಿಸಿದ ಮತಕೇಂದ್ರವಾದ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಬಕ್ಕೇಶ್ವರ ಸ್ಕೂಲ್ ಮತಗಟ್ಟೆಗೆ ತೆರಳಿ ಮತ ಚಲಾಯಿಸಿದರು. ಮದುವೆಯ ನಂತರ ಮೊದಲ ಮತದಾನ ಮಾಡಿ, ಯಶಸ್ವಿಯಾಗಿದ್ದಾರೆ.


MAHANTH MOTORS
mahindra Rise
We Are Hiring!
Role - Sales Consultants
Qualification
Any Degree
Location: All talukas of Davangere & Shimoga district
E-Mail : hr@mahanthmotors.com
+919611822556 Head Office : Near Alkola Circle, Sagar Road, Sadikoppa, Shimoga - 577 204
+919148018778 Branch Office : Opp. GMIT College, Harihar Road, Davanagere- 577 006


### ಮಾತು ಮಾಣಿಕ್ಯ

ಗೌರವ ಹಾಗೂ ಲಾಭ ಎರಡೂ ಒಂದೇ ಬುಟ್ಟಿಯಲ್ಲಿರುವುದಿಲ್ಲ.
- ಜಾರ್ಜ್ ಹರ್ಬರ್ಟ್

## ಆಪರೇಷನ್ ಕಮಲ ಅಗತ್ಯ ಬಾರದು



ಬೆಂಗಳೂರು, ಮೇ 11 - ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ 120ರಿಂದ 125 ಸ್ಥಾನಗಳನ್ನು ಪಡೆಯಲಿದೆ. ಆಪರೇಷನ್ ಕಮಲದ ಅಗತ್ಯ ಬರುವುದಿಲ್ಲ ಎಂದು ಕೇಂದ್ರ ಸಚಿವೆ ಹಾಗೂ ಬಿಜೆಪಿ ನಾಯಕಿ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಚುನಾವಣೋತ್ತರ ಸಮೀಕ್ಷೆಗಳು ಸುಳ್ಳಾಗಲಿವೆ ಎಂದೂ ಅವರು ಹೇಳಿದ್ದಾರೆ. ಬಹುತೇಕ ಚುನಾವಣೋತ್ತರ ಸಮೀಕ್ಷೆಗಳು ಕಾಂಗ್ರೆಸ್‌ಗೆ ಮುನ್ನಡೆಯಾಗಲಿದೆ, ಆದರೆ ಅತಂತ್ರ ಪರಿಸ್ಥಿತಿ ಉಂಟಾಗಲಿದೆ ಎಂದು ತಿಳಿಸಿವೆ.

ಚುನಾವಣೆಯಲ್ಲಿ ಅತಂತ್ರ ಪರಿಸ್ಥಿತಿ ಉಂಟಾಗುವುದಿಲ್ಲ. ನಾವು 120ರಿಂದ 125 ಸ್ಥಾನಗಳಲ್ಲಿ ಗೆಲ್ಲಲಿದ್ದೇವೆ. ಪಕ್ಷ ಕೆಲವು ಸೀಟುಗಳಲ್ಲಿ ನಿರೀಕ್ಷೆಗೂ ಮೀರಿ ಸಾಧನೆ ಮಾಡಲಿದೆ ಎಂದವರು ಪತ್ರಕರ್ತರೊಂದಿಗೆ ಮಾತನಾಡಿದ ಕರಂದ್ಲಾಜೆ ಹೇಳಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ 150 ಸ್ಥಾನ ಗೆಲ್ಲುವುದಾಗಿ ಬಿಜೆಪಿ ವಿಶ್ವಾಸ ವ್ಯಕ್ತಪಡಿಸುತ್ತಿದ್ದ ಬಗ್ಗೆ ಪ್ರಶ್ನಿಸಿದಾಗ, ಮತಗಟ್ಟೆ ಹಂತದ ಕಾರ್ಯಕರ್ತರಿಂದ ವರದಿ ಪಡೆದಿದ್ದೇವೆ. 120-125 ಸ್ಥಾನ ದೊರೆಯಲಿವೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ ಎಂದರು.

## ನಗರದಲ್ಲಿ ನಾಡಿದ್ದು ಪಶುಸಂಗೋಪನಾ ತರಬೇತಿ

ದಾವಣಗೆರೆ,ಮೇ 11- ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 15 ಮತ್ತು 16 ರಂದು ಕುರಿ ಮತ್ತು ಮೇಕೆ ಸಾಗಾಣಿಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## 'ರಶ್ಮಿ' ಪ್ರೌಢಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 11 - ನಗರದ ಡಾ.ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್ ವತಿಯಿಂದ ನಡೆಸುತ್ತಿರುವ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ಈ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಬಂದಿದೆ.


**ಅಡಿಕೆ ಸಸಿಗಳು ಮಾರಾಟಕ್ಕಿವೆ**
ದಾವಣಗೆರೆ ತರಳಬಾಳು ಕೃಷಿ ಕೇಂದ್ರದ ಸಲಹೆ ಪಡೆದು ವೈಜ್ಞಾನಿಕವಾಗಿ ಸಂಸ್ಕರಿಸಿ ಬೆಳೆಸಿದ ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ಕೈದಾಳ್ ತೋಟದಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ
98807 39392
98807 43838



KSS Foundation ® Davanagere
**ಕೆಎಸ್‌ಎಸ್ ಆಂಗ್ಲ ಮಾಧ್ಯಮ (ವಸತಿಯುತ) ಶಾಲೆ**
#1382/5, 6, "ಮಾತೃಕೃಪ" 2ನೇ ಕ್ರಾಸ್, ಸರಸ್ವತಿನಗರ, ದಾವಣಗೆರೆ–577004.
M: 9880127276, 9036440625, 9035770629, 8296040646
ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಬೇಕಾಗಿದ್ದಾರೆ
Salary Package : 10,000 to 40,000

| Qualification | Subject | Post |
|---|---|---|
| M.Sc/B.Ed | Chemistry Lecturer | 01 |
| MA/B.Ed | English Lecturer | 01 |
| MA/B.Ed | Kannada Lecturer | 01 |
| D.Ed/B.Ed | LKG/ UKG Teachers | 06 |
| B.Sc/B.Ed | Maths Teacher | 04 |
| BA/B.Ed | English Teacher | 04 |
| B.Sc/B.Ed | Science Teacher | 04 |
| D.Ed/B.Ed | Hindi Teacher | 01 |
| BA/B.Ed | Social Science Teacher | 04 |
| BA/BP.Ed | Physical Edn Teacher | 02 |
| BFA/B.V.E. | Art and Craft Teacher | 02 |
| B Music | Music Teacher | 01 |
| BA/B.Sc/ B.Ed or MSW | Hostel Warden Male(2), Female(2) | 04 |
| Exp in Cooking | Cooks for Hostel | 02 |
| Exp in Asst Cooking | Hostel Cooking Assistance | 04 |

ಜ್ಯೇಷ್ಠತಾ ಆಧಾರದನ್ವಯ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು.
ವಿಶೇಷ ಸೂಚನೆ: ಶಿಕ್ಷಕರ ಹುದ್ದೆಗಳಿಗೆ ಕಡ್ಡಾಯವಾಗಿ ಇಂಗ್ಲೀಷ್ ಭಾಷೆಯನ್ನು ನಿರರ್ಗಳವಾಗಿ ಮಾತನಾಡುವಂತಿರಬೇಕು ಹಾಗೂ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.
ಬಿ.ವಿಕಾಸ್, BE, BBM, ವ್ಯವಸ್ಥಾಪಕ ನಿರ್ದೇಶಕರು
ಹೆಚ್.ಕೆ. ಬಸವರಾಜ್, MBA-Em, ಕಾರ್ಯದರ್ಶಿಗಳು


## ಕೊಂಡಜ್ಜಿ ಕೆ.ಎನ್. ಸದಾಶಿವಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ,
**ಶ್ರೀ ಕೊಂಡಜ್ಜಿ ಕೆ.ಎನ್. ಸದಾಶಿವಪ್ಪ** ಅವರು
ದಿನಾಂಕ 11-5-2023ರ ಗುರುವಾರ ಬೆಳಗಿನಜಾವ 5.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 71 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11-05-2023ರ ಗುರುವಾರ ಸಂಜೆ ಕಕ್ಕರಗೊಳ್ಳ ಗ್ರಾಮದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**
ಧರ್ಮಪತ್ನಿ : ಶ್ರೀಮತಿ ಪುಷ್ಪಾ ಸದಾಶಿವಪ್ಪ, ತಾಲ್ಲೂಕು ಪಂಚಾಯ್ತಿ ಮಾಜಿ ಸದಸ್ಯರು ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕೊಂಡಜ್ಜಿ ವಂಶಸ್ಥರು, ಕಕ್ಕರಗೊಳ್ಳ.


mahindra TRACTORS
TOUGH HARDUM
MARUTHI MOTORS
We Are Hiring!
Interview Date : 16th May 2023

**Sales executive :**
Required at Jagalur, Channagiri & Honnalli
Qualification : Degree /PUC.
Experience : Fresher or Previous experience in Tractor industry

**Sales Manager :**
Required at Honnalli
Qualification : PUC / Degree
Experience : Min. 8 yrs experience in Tractor/Agriculture Industry

**Mechanic / Asst Mechanic :**
Required at Davanagere, Jagalur, Channagiri & Honnalli
Qualification : ITI/PUC
Experience : Fresher or Previous experience in Tractor industry

Venue : MARUTHI MOTORS
PB Road, Opp Ravi Oil Mill, Avaragere, Davanagere
Mob : 9972660300, 7022291008



**ಶ್ರೀ ಶಿವಕುಮಾರಸ್ವಾಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
#1660/47-1, 1ನೇ ಮಹಡಿ, 12ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ ದಾವಣಗೆರೆ - 577 005. ಫೋನ್ : 263129.

**ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ**



ಶ್ರೀ ಶಿವಶಂಕರಸ್ವಾಮಿ
ಅಧ್ಯಕ್ಷರು

ದಿನಾಂಕ : 11.05.2023 ರಂದು ಸೊಸೈಟಿಗೆ ನೂತನ ಅಧ್ಯಕ್ಷರಾಗಿ **ಶ್ರೀ ಶಿವಶಂಕರಸ್ವಾಮಿ** ಹಾಗೂ ಉಪಾಧ್ಯಕ್ಷರಾಗಿ **ಶ್ರೀ ಎಸ್.ಕೆ. ಕೊಟ್ರೇಶ್** ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುವ ಇವರಿಗೆ
ಹೃತ್ಪೂರ್ವಕ ಅಭಿನಂದನೆಗಳು



ಶ್ರೀ ಎಸ್.ಕೆ. ಕೊಟ್ರೇಶ್
ಉಪಾಧ್ಯಕ್ಷರು

ಶ್ರೀ ಎನ್. ಪರಶುರಾಮನಗೌಡರು, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು
ಶ್ರೀ ಜಿ.ಕರಿಬಸಪ್ಪ, ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರು
ಶ್ರೀ ಎಸ್.ಜಿ.ಮಲ್ಲಿಕಾರ್ಜುನ ಬಾಬು, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು
ಶ್ರೀ ಬಿ.ಎ. ಮುರುಗೇಶ್, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು
ಶ್ರೀ ಕುಬೇಂದ್ರಪ್ಪ, ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರು
ಶ್ರೀ ಎಂ. ಜಯಪ್ಪ, ನಿರ್ದೇಶಕರು
ಶ್ರೀ ಎನ್. ಲಕ್ಷ್ಮಣ್ ನಾಯ್ಕ, ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರು
ಶ್ರೀ ಆರ್. ಅರವಿಂದ, ನಿರ್ದೇಶಕರು
ಶ್ರೀಮತಿ ಶಾರದಮ್ಮ, ನಿರ್ದೇಶಕರು
ಶ್ರೀಮತಿ ಸಿ.ಓ. ವಿನೋದಮ್ಮ, ನಿರ್ದೇಶಕರು

ಸರ್ವ ಸದಸ್ಯರು ಮತ್ತು ಸಿಬ್ಬಂದಿ ವರ್ಗ



**ಹೃದಯ ಪೂರ್ವಕ ಕೃತಜ್ಞತೆಗಳು**

ದಿನಾಂಕ 10-05-2023ರಂದು ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗೌರವ ನೀಡಿ, ಚನ್ನಗಿರಿ ಕ್ಷೇತ್ರದ ಮತದಾರರು ಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲೂ ಶಾಂತ ರೀತಿಯಿಂದ ಮತದಾನ ಪ್ರಕ್ರಿಯಲ್ಲಿ ಪಾಲ್ಗೊಂಡು ಗೌರವ ಪೂರ್ವಕವಾಗಿ ತಮ್ಮ ಹಕ್ಕನ್ನು ಚಲಾಯಿಸಿರುತ್ತೀರಿ. ಆ ಮೂಲಕ ಶಾಂತಿ ಸಾಗರದ ಜನ ಶಾಂತಿ ಪ್ರಿಯರು ಎಂಬುದನ್ನು ಮತ್ತೊಮ್ಮೆ ನಿರೂಪಿಸಿದಂತಾಗಿದೆ ನಿಮಗೆಲ್ಲರಿಗೂ ನಾನು ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

ಕ್ಷೇತ್ರದ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಯಾವುದೇ ಅಹಿತಕರ ಘಟನೆಗಳು ಹಾಗೂ ಲೋಪಗಳು ನಡೆಯದಂತೆ ಕಾರ್ಯನಿರ್ವಹಿಸಿದ ಚುನಾವಣಾ ಆಯೋಗಕ್ಕೆ, ಚುನಾವಣಾ ಆಯೋಗದ ಅಡಿಯಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳಿಗೆ, ಎಲ್ಲಾ ನೌಕರರಿಗೆ, ವಿಶೇಷವಾಗಿ ಮಹಿಳಾ ನೌಕರರಿಗೆ, ಆರಕ್ಷಕ ಹಾಗೂ ಸಿ.ಆರ್.ಪಿ.ಎಫ್ ಸಿಬ್ಬಂದಿಯವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಬಸವರಾಜು ವಿ. ಶಿವಗಂಗಾ
ಕಾಂಗ್ರೆಸ್ ಅಭ್ಯರ್ಥಿ,
ಚನ್ನಗಿರಿ ವಿಧಾನಸಭಾ ಕ್ಷೇತ್ರ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte